School Leadership

TESS India

# Transforming teaching-learning process: supporting teachers to raise performance

## ಬೋಧನಾ-ಕಲಿಕಾ ಪ್ರಕ್ರಿಯೆನ್ನು ಪರಿವರ್ತಿಸುವುದು: ಶಿಕ್ಷಕರ ವೃತ್ತಿಪರ ಬೆಳವಣಿಗೆಯ ನೇತೃತ್ವವಹಿಸುವುದು





Teacher Education through School-based Support in India
www.TESS-India.edu.in

The Open University

UKaid from the British people

CC BY SA
http://creativecommons.org/licenses/

ಶಾಲಾ ನಾಯಕತ್ವಕ್ಕೆ ಸಂಬಂಧಿಸಿದ ಈ **ಮುಕ್ತ ಶೈಕ್ಷಣಿಕ ಸಂಪನ್ಮೂಲವೂ (Open Educational Resource-OER)** ಶಾಲೆಯಲ್ಲಿ ಭೋದನೆ ಮತ್ತು ಕಲಿಕೆಯಲ್ಲಿ ಸುಧಾರಣೆ ತರುವ ಬಗ್ಗೆ ನಾಯಕತ್ವ ವಹಿಸಲು ಇಚ್ಛಿಸುವವರಿಗೆ, ಅದಕ್ಕೆ ಪೂರಕವಾಗಿ ಮಾಹಿತಿ ಹಾಗೂ ಕೌಶಲ್ಯಗಳನ್ನು ಬೆಳೆಸಿಕೊಳ್ಳಲು ಸಹಾಯವಾಗುವಂತೆ **ಟೆಸ್–ಇಂಡಿಯಾ ಸಂಸ್ಥೆ** ರೂಪಿಸಿರುವ 20 ಘಟಕಗಳಲ್ಲಿ ಒಂದು. ಶಾಲೆಯಲ್ಲಿ ಶಿಕ್ಷಕರು, ವಿದ್ಯಾರ್ಥಿಗಳ ಹಾಗೂ ಇತರರ ಭಾಗವಹಿಸುವಿಕೆಯಿಂದ ನಡೆಸಬಹುದಾದ ಚಟುವಟಿಕೆಗಳನ್ನು ಒಳಗೊಂಡಿರುವ, ಅವಶ್ಯವಾಗಿ ಪ್ರಯೋಗಿಸಬಹುದಾದ ಘಟಕಗಳನ್ನು ಇದು ಹೊಂದಿದೆ. ಯಶಸ್ವಿ ಶಾಲೆಗಳಲ್ಲಿ ನಡೆಸಲಾದ ಶೈಕ್ಷಣಿಕ ಅಧ್ಯಯನ ಹಾಗೂ ಸಂಶೋಧನೆಗಳನ್ನು ಇದು ಆಧರಿಸಿದೆ.

ಈ ಘಟಕಗಳನ್ನು ಅಧ್ಯಯನ ಮಾಡಲು ಯಾವುದೇ ನಿರ್ದಿಷ್ಟ ಕ್ರಮ ಅನುಸರಿಸಬೇಕಿಲ್ಲವಾದರೂ, ಅನುಕೂಲಿಸುವವರಾಗಿ (enabler) **'ಶಾಲಾ ಮುಖ್ಯಸ್ಥ'** ಎಂಬ ಘಟಕದಿಂದ ಪ್ರಾರಂಭಿಸುವುದು ಸೂಕ್ತ. ಏಕೆಂದರೆ, ಇದು ಇಡೀ ಕೈಪಿಡಿಗೆ ಒಂದು ನಿರ್ದಿಷ್ಟ ನಿರ್ದೇಶನ ನೀಡುತ್ತದೆ. ಕೆಲವು ನಿರ್ದಿಷ್ಟ ವಿಷಯಗಳಿಗೆ ಸಂಬಂಧಿಸಿದಂತೆ ಘಟಕಗಳನ್ನು ಬೇರ್ಪಡಿಸಿ ಅಧ್ಯಯನ ಮಾಡಲು ನೀವು ಆಯ್ಕೆ ಮಾಡಿಕೊಳ್ಳಬಹುದು. **ರಾಷ್ಟ್ರೀಯ ಶಾಲಾ ನಾಯಕತ್ವದ ಪಠ್ಯಕ್ರಮದ ನೆಲೆಗಟ್ಟು (National School leadership Curriculum Framework-India)** ಗುರುತಿಸಿರುವ ಶಾಲಾ ನಾಯಕತ್ವದ ಯಥಾದರ್ಶನ (1), ಸ್ವಯಂ ಅಭಿವೃದ್ಧಿ ಹಾಗೂ ನಿರ್ವಹಣೆ (2), ಭೋದನೆ–ಕಲಿಕೆ ಪ್ರಕ್ರಿಯೆಗಳಲ್ಲಿ ಪರಿವರ್ತನೆ (3) ಹಾಗೂ ಪಾಲುದಾರಿಕೆಯಲ್ಲಿ ಅಗ್ರಗಾಮಿ (6)– ಈ ಪ್ರಮುಖ ಕ್ಷೇತ್ರಗಳನ್ನು ನಾವೀನ್ಯತೆ ಹಾಗೂ ತಂಡಗಳನ್ನು ಮುನ್ನಡೆಸುವುದಕ್ಕೆ ಸಂಬಂಧಿಸಿದ (4) ಮತ್ತು (5)ನೇ ಕ್ಷೇತ್ರಗಳನ್ನು ಕೇಂದ್ರೀಕರಿಸದೆ, ವಿವಿಧ ಘಟಕಗಳಲ್ಲಿ ಮಿಳಿತಗೊಳಿಸಲಾಗಿದೆ. ಕೆಲವು ಘಟಕಗಳಲ್ಲಿ ಒಂದಕ್ಕಿಂತ ಹೆಚ್ಚು ಕ್ಷೇತ್ರಗಳನ್ನು ವಿವರಿಸಲಾಗಿದೆ.

ಶಾಲೆಯ ಮುಖ್ಯಸ್ಥರು ಈ ಘಟಕಗಳನ್ನು ಸ್ವಅಧ್ಯಯನಕ್ಕಾಗಿ ಇಲ್ಲವೇ ನಾಯಕತ್ವ ಭೋದನೆ ಕಾರ್ಯಕ್ರಮದ ಭಾಗವಾಗಿ ಬಳಸಬಹುದು. ಎರಡೂ ವಿಧಾನಗಳಲ್ಲಿ ಚಟುವಟಿಕೆಗಳನ್ನು ಹಾಗೂ ವಸ್ತುಸ್ಥಿತಿ ಅಧ್ಯಯನಗಳನ್ನು ಹಾಗೂ ಕಲಿಕೆಯ ಅನುಭವಗಳನ್ನು ಇತರರೊಡನೆ ಹಂಚಿಕೊಳ್ಳುವ ದೃಷ್ಟಿಯಿಂದ, ವೈಯುಕ್ತಿಕವಾಗಿ ಒಂದು ಕಲಿಕಾ ಡೈರಿಯನ್ನು ಇಟ್ಟುಕೊಳ್ಳುವುದು ಉಪಯುಕ್ತವಾಗುತ್ತದೆ. ಇಲ್ಲಿ ಬಳಸಲಾಗಿರುವ **'ಶಾಲಾಮುಖ್ಯಸ್ಥ'** ಅಥವಾ **'ಶಾಲಾ ನಾಯಕ'** ಎಂಬ ಪದವು ಕೇವಲ ಮುಖ್ಯ ಶಿಕ್ಷಕ ಅಥವಾ ಪ್ರಿನ್ಸಿಪಾಲರು ಮಾತ್ರವಲ್ಲದೆ, ಶಾಲೆಯಲ್ಲಿ ನಾಯಕತ್ವದ ಜವಾಬ್ದಾರಿಯನ್ನು ಹೊರಲು ಸಿದ್ಧವಿರುವ ಯಾವುದೇ ವ್ಯಕ್ತಿಗೆ ಅನ್ವಯಿಸುತ್ತದೆ.

**ವೀಡಿಯೋ ಸಂಪನ್ಮೂಲಗಳು**

ಎಂಬ ಗುರುತು **ಟೆಸ್–ಇಂಡಿಯಾ** ನಾಯಕತ್ವದ ವೀಡಿಯೋ ಸಂಪನ್ಮೂಗಳನ್ನು ಸೂಚಿಸುತ್ತದೆ. ಇವುಗಳಲ್ಲಿ ಭಾರತೀಯ ಶಾಲೆಗಳ ಮುಖ್ಯಸ್ಥರು ತಮ್ಮ ಶಾಲೆಗಳಲ್ಲಿ ಭೋದನೆ ಹಾಗೂ ಕಲಿಕೆಯಲ್ಲಿ ಬದಲಾವಣೆ ತರಲು ತಾವು ನಡೆಸಿದ ಪ್ರಯತ್ನಗಳ ಬಗ್ಗೆ ಹೇಳಿಕೊಂಡಿದ್ದಾರೆ. ಅಂಥದ್ದೇ ಕಾರ್ಯಕ್ರಮಗಳನ್ನು ನೀವೂ ಪ್ರಯೋಗಿಸುವ ನಿಟ್ಟಿನಲ್ಲಿ ಈ ವೀಡಿಯೊಗಳು ನಿಮಗೆ ಸ್ಪೂರ್ತಿ ನೀಡಬಹುದು ಎಂದು ನಿರೀಕ್ಷಿಸಲಾಗಿದೆ. ಈ ವೀಡಿಯೊಗಳು ಪಠ್ಯದಲ್ಲಿ ನೀಡಲಾಗಿರುವ ಮಾಹಿತಿಗಳಿಗೆ ಪೂರಕವಾಗಿದ್ದು ನಿಮಗೆ ನೆರವಾಗುತ್ತವೆಯಾದರೂ, ಅವುಗಳ ನೆರವು ದೊರಕದೇ ಹೋದರೂ ಸಮಸ್ಯೆ ಯಾಗದಂತೆ ಅವಶ್ಯಕ ಮಾಹಿತಿಯನ್ನು ಪಠ್ಯದಲ್ಲಿ ಸೇರಿಸಲಾಗಿದೆ.

ಟೆಸ್ ಇಂಡಿಯಾ ವೀಡಿಯೋ ಸಂಪನ್ಮೂಲಗಳನ್ನು http://www.tess-india.edu.in ಎಂಬ ವೆಬ್‌ಸೈಟ್‌ನಲ್ಲಿ ನೇರವಾಗಿ ನೋಡಬಹುದು ಇಲ್ಲವೇ ಡೌನ್‌ಲೋಡ್ ಮಾಡಿಕೊಳ್ಳಬಹುದು. ಇಲ್ಲವೇ ಮೆಮೋರಿ ಕಾರ್ಡ್ ಅಥವಾ ಸಿಡಿಯ ಮೂಲಕ ಪಡೆಯಬಹುದು.

**ಟೆಸ್–ಇಂಡಿಯಾ (Teacher Education through School based Support) ಯೋಜನೆಯ ಬಗ್ಗೆ**

ವಿದ್ಯಾರ್ಥಿ–ಕೇಂದ್ರಿತ ಹಾಗೂ ವಿದ್ಯಾರ್ಥಿಗಳನ್ನು ಒಳಗೊಂಡ ಕಲಿಕಾ ಪದ್ಧತಿಯನ್ನು ಅಭಿವೃದ್ಧಿ ಪಡಿಸಿಕೊಳ್ಳಲು ಮುಕ್ತ ಶೈಕ್ಷಣಿಕ ಸಂಪನ್ಮೂಲಗಳನ್ನು ಒದಗಿಸುವ ಮೂಲಕ ಪ್ರಾಥಮಿಕ ಹಾಗೂ ಪ್ರೌಢಶಾಲಾ ಹಂತದ ಶಿಕ್ಷಕರಿಗೆ ಮತ್ತು ಶಾಲಾ ಮುಖ್ಯಸ್ಥರಿಗೆ ನೆರವಾಗುವುದು **ಟೆಸ್–ಇಂಡಿಯಾದ** ಉದ್ದೇಶ. ಭಾಷೆ, ವಿಜ್ಞಾನ ಹಾಗೂ ಗಣಿತ ಕಲಿಕೆಯಲ್ಲಿ ಪಠ್ಯಪುಸ್ತಕಕ್ಕೆ ಪೂರಕವಾಗಿ ಸಿದ್ಧಪಡಿಸಲಾರುವ **105 ಟೆಸ್–ಇಂಡಿಯಾ ಒಇಆರ್(OER)ಗಳು** ಈ ನಿಟ್ಟಿನಲ್ಲಿ ಶಿಕ್ಷಕರಿಗೆ ನೆರವಾಗಲಿವೆ. ತಮ್ಮ ವಿದ್ಯಾರ್ಥಿಗಳಿಗೆ ತರಗತಿಯಲ್ಲಿ ಮಾಡಿ ತೋರಿಸಬಹುದಾದ ಚಟುವಟಿಕೆಗಳನ್ನು ಒದಗಿಸುವುದರ ಜೊತೆಗೆ, ಬೇರೆ ಬೇರೆ ಶಾಲೆಗಳಲ್ಲಿ ಶಿಕ್ಷಕರು ಹೇಗೆ ಈ ವಿಧಾನವನ್ನು ಅನುಸರಿಸುತ್ತಿದ್ದಾರೆ ಎಂಬ ವಸ್ತುಸ್ಥಿತಿ ಅಧ್ಯಯನಗಳನ್ನೂ ಇವು ಒಳಗೊಂಡಿವೆ. ಅಲ್ಲದೆ, ತಮ್ಮ ವಿಷಯ ಜ್ಞಾನವನ್ನು ಹೆಚ್ಚಿಸಿಕೊಳ್ಳಲು ಹಾಗೂ ಪಾಠಯೋಜನೆಗಳನ್ನು ರಚಿಸಲು ಶಿಕ್ಷಕರಿಗೆ ನೆರವಾಗುವ ಸಂಪನ್ಮೂಲಗಳ ಮಾಹಿತಿ ಕೊಂಡಿ (link)ಗಳನ್ನು ಒಳಗೊಂಡಿದೆ.

ನಮ್ಮ ದೇಶದ ಪಠ್ಯಕ್ರಮವನ್ನು ಅನುಸರಿಸಿ, ಭಾರತೀಯ ಹಾಗೂ ಅಂತರರಾಷ್ಟ್ರೀಯ ಲೇಖಕರಿಂದ ಸಂಯುಕ್ತವಾಗಿ ಸಿದ್ಧಪಡಿಸಲಾಗಿರುವ ಈ ಸಂಪನ್ಮೂಲಗಳು **http://tess-indiaedu.in** ವೆಬ್‌ಸೈಟಿನಲ್ಲಿ ಅಧ್ಯಯನ ಮಾಡಲು ಇಲ್ಲವೇ ಡೌನ್‌ಲೋಡ್ ಮಾಡಿಕೊಳ್ಳಲು ಮುಕ್ತವಾಗಿ ದೊರಕುತ್ತವೆ. ಭಾರತದ ವಿವಿಧ ರಾಜ್ಯಗಳ ಬಳಕೆದಾರರಿಗೆ ಅನುಕೂಲವಾಗುವಂತೆ ಸಂಪನ್ಮೂಲ ವಿವಿಧ ವರ್ಷನ್‌ಗಳನ್ನು ಹೊಂದಿದೆ. ಸ್ಥಳೀಯ ಮಾಹಿತಿ ಹಾಗೂ ಅವಶ್ಯಕತೆಗಳಿಗೆ ಅನುಗುಣವಾಗಿ ಸಂಪನ್ಮೂಲಗಳನ್ನು ಹೊಂದಿಸಿಕೊಳ್ಳುವಂತೆ ಶಿಕ್ಷಕರನ್ನು ಕೋರಲಾಗಿದೆ. ಯುಕೆ ಸರ್ಕಾರದ ಅನುದಾನದಲ್ಲಿ, ಯುಕೆಯ ಮುಕ್ತವಿಶ್ವವಿದ್ಯಾಲಯದಲ್ಲಿ **ಟೆಸ್–ಇಂಡಿಯಾ** ರೂಪುಗೊಂಡಿದೆ.

*Version 2.0 SL07v1*

*Except for third party materials and otherwise stated, this content is made available under a Creative Commons Attribution-ShareAlike licence: http://creativecommons.org/licenses/by-sa/3.0/*

# ಈ ಘಟಕದಲ್ಲಿ ಏನಿದೆ?

ಒಂದು ಆದರ್ಶಪ್ರಾಯವಾದ ಪ್ರಪಂಚದಲ್ಲಿ ಇತ್ತೀಚಿನ ಕಲಿಕೆ ಸಿದ್ಧಾಂತಗಳ ಬಗ್ಗೆ ತಿಳಿದಿರುವ ಹಾಗು ಅದನ್ನು ಪ್ರತಿಯೊಬ್ಬ ವಿದ್ಯಾರ್ಥಿಯ ಅಗತ್ಯಗಳಿಗೆ ಹೇಗೆ ಅಳವಡಿಸಿಕೊಳ್ಳಬೇಕೆಂಬ ಅರಿವಿರುವ ಶಿಕ್ಷಕರ ಸಹಾಯದಿಂದ ಎಲ್ಲಾ ವಿದ್ಯಾರ್ಥಿಗಳು ಶಾಲೆಯಲ್ಲಿ ಪ್ರತಿ ವರ್ಷ ಉತ್ತಮ ಕಲಿಕೆಯ ಲಾಭವನ್ನು ಪಡೆಯುತ್ತಾರೆ. ಶಿಕ್ಷಕರ ಜೀವನದಲ್ಲಿ ಬೇರೆಡೆಗಳಲ್ಲಿ ಏನು ನಡೆಯುತ್ತಿದ್ದರೂ ಸಹ, ಅವುಗಳನ್ನೆಲ್ಲಾ ಹೊರತುಪಡಿಸಿ, ಶಾಲೆಯು ಒದಗಿಸುವ ಸಂಪನ್ಮೂಲಗಳ ಮೂಲಕ ಶಿಕ್ಷಕರು ಇದನ್ನು ಸಾಧಿಸಬಲ್ಲರು.

ಆದರೆ, ನಾವು ಆದರ್ಶಪ್ರಾಯವಾದ ಪ್ರಪಂಚದಲ್ಲಿ ಬದುಕುತ್ತಿಲ್ಲ. ಶಿಕ್ಷಕರೂ ಮನುಷ್ಯರಾಗಿದ್ದು, ಕೆಲವೊಮ್ಮೆ ಅವರುಗಳು ತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಅತ್ಯುತ್ತಮವಾಗಿ ಕೆಲಸ ನಿರ್ವಹಿಸಲು ಸಾಧ್ಯವಾಗದ ಪರಿಸ್ಥಿತಿಗಳಲ್ಲಿ ತಮ್ಮನ್ನು ಕಂಡುಕೊಳ್ಳುತ್ತಾರೆ. ಅವರಿಗೆ ಈ ಬಗ್ಗೆ ಅರಿವಿದ್ದರೆ, ಸುಧಾರಿಸಿಕೊಳ್ಳಲು ಸ್ವಲ್ಪ ಮಟ್ಟಗಿನ ಬೆಂಬಲ ಸಾಕಾಗುತ್ತದೆ- ಆದರೆ ಶಿಕ್ಷಕರು ತಾವು ಇನ್ನೂ ಉತ್ತಮವಾಗಿ ಕಾರ್ಯನಿರ್ವಹಿಸಬಲ್ಲೆವು ಎಂದು ಅರಿತುಕೊಳ್ಳದಿದ್ದಾಗ ಮತ್ತು ವಿದ್ಯಾರ್ಥಿಗಳ ಕಲಿಕೆಗೆ ಕುಂದುಂಟಾದಾಗ, ಸಮಸ್ಯೆ ಉಂಟಾಗುತ್ತದೆ. ಇದೊಂದು ಸೂಕ್ಷ್ಮ ವಿಷಯವಾಗಿದ್ದು, ಇದನ್ನು ಜಾಗರೂಕತೆಯಿಂದ ನಿರ್ವಹಿಸಬೇಕಾಗುತ್ತದೆ. ಆದರೆ ಇದು ಒಬ್ಬ ಉತ್ತಮ ಶಾಲಾ ನಾಯಕನ ಪಾತ್ರ ಮತ್ತು ಜವಾಬ್ದಾರಿಗಳ ಒಂದು ಭಾಗವೇ ಆಗಿದೆ.

ಈ ಘಟಕದಲ್ಲಿ ನೀವು ಶಿಕ್ಷಕರ ಕಾರ್ಯಕ್ಷಮತೆಯ ಬಗ್ಗೆ ಸಾಕ್ಷ್ಯಾಧಾರಗಳನ್ನು ಹೇಗೆ ಸಂಗ್ರಹಿಸುವುದು ಹಾಗು ಬೆಂಬಲ ಪೂರಕವಾದ ಅಭಿವೃದ್ಧಿ ಚಟುವಟಿಕೆಗಳನ್ನು ಬಳಸಿ ಶಿಕ್ಷಕರ ಕಾರ್ಯಕ್ಷಮತೆಯನ್ನು ಹೇಗೆ ಉತ್ತಮಗೊಳಿಸಬಹುದೆಂಬ ಕೆಲವು ಪರಿಕಲ್ಪನೆಗಳನ್ನು ತಿಳಿದುಕೊಳ್ಳಬಲ್ಲಿರಿ. ನಿಮ್ಮ ಶಿಕ್ಷಕರು ವಿದ್ಯಾರ್ಥಿಗಳ ಸಾಧನೆಯ ಅತ್ಯಂತ ದೊಡ್ಡ ನಿರ್ಧಾರಕ ಅಂಶವಾಗಿರುವುದರಿಂದ , ಶಿಕ್ಷಕರ ಕಾರ್ಯಕ್ಷಮತೆಗೆ ಒತ್ತಾಸೆ ನೀಡುವ ನಿಮ್ಮ ಪ್ರಭಾವ, ವಿದ್ಯಾರ್ಥಿಯ ಕಲಿಕೆ ಮತ್ತು ಫಲಿತಾಂಶಗಳ ಮೇಲೆ ನೇರವಾದ ಪರಿಣಾಮ ಬೀರುತ್ತದೆ. ಒಬ್ಬ ಶಾಲಾ ನಾಯಕರಾಗಿ ಶಿಕ್ಷಕರು ಅವರ ಕಾರ್ಯಕ್ಷಮತೆಯನ್ನು ಹೆಚ್ಚಿಸಿಕೊಳ್ಳಲು ನೀವು ಸಹಾಯ ಹಸ್ತ ನೀಡುವುದರಿಂದ, ಅವರು ಹೆಚ್ಚು ಪ್ರಭಾವ ಬೀರಲು ಸಾಧ್ಯವಾಗುತ್ತದೆ.

## ಕಲಿಕೆ ಡೈರಿ

ಈ ಘಟಕದಲ್ಲಿ ನೀವು ಕೆಲಸ ಮಾಡುವಾಗ, ನಿಮ್ಮ ಕಲಿಕೆ ಡೈರಿಯಲ್ಲಿ ( ಒಂದು ಪುಸ್ತಕ ಅಥವಾ ಒಂದು ಫೋಲ್ಡರ್) ಟಿಪ್ಪಣಿಗಳನ್ನು ಬರೆದುಕೊಳ್ಳಲು ಸೂಚಿಸಲಾಗುತ್ತದೆ. ನಿಮ್ಮ ಆಲೋಚನೆಗಳನ್ನು ಹಾಗು ಯೋಜನೆಗಳನ್ನು ಒಂದೆಡೆ ಸಂಗ್ರಹಿಸಿ ಇಟ್ಟುಕೊಳ್ಳಲು ಈ ಡೈರಿ ನೆರವಾಗುತ್ತದೆ. ಬಹುಶ: ಈಗಾಗಲೆ ನೀವು ಇಂತಹ ಒಂದು ಡೈರಿಯನ್ನು ಬರೆಯಲು ಪ್ರಾರಂಭಿಸಿರಬಹುದು.

ನೀವು ಈ ಘಟಕದ ಬಗ್ಗೆ ಒಬ್ಬರೇ ಕೆಲಸ ಮಾಡುತ್ತಿರಬಹುದಾದರೂ, ಮತ್ತೊಬ್ಬ ಶಾಲಾ ನಾಯಕರೊಡನೆ ನಿಮ್ಮ ಕಲಿಕೆಯನ್ನು ಹಂಚಿಕೊಂಡರೆ ನೀವು ಇನ್ನೂ ಹೆಚ್ಚಿನದನ್ನು ಕಲಿಯಬಹುದು. ಇವರು ನೀವು ಒಟ್ಟಾಗಿ ಕೆಲಸ ಮಾಡುವ ಸಹದ್ಯೋಗಿಯಾಗಿರಬಹುದು ಅಥವಾ ಒಂದು ಹೊಸ ಸಂಬಂಧವನ್ನು ಬೆಳೆಸಿಕೊಳ್ಳಬಹುದಾದ ವ್ಯಕ್ತಿಇರಬಹುದು. ಇದನ್ನು ಒಂದು ವ್ಯವಸ್ಥಿತ ರೀತಿಯಲ್ಲಿ ಅಥವಾ ಅನೌಪಚಾರಿಕವಾಗಿಯೂ ಮಾಡಬಹುದು. ಈ ತರಹದ ಭೇಟಿಗಳಲ್ಲಿ, ನೀವು ಕಲಿಕೆ ಡೈರಿಯಲ್ಲಿ ಮಾಡಿಕೊಂಡಿರುವ ಟಿಪ್ಪಣಿಗಳು ಉಪಯೋಗವಾಗುವುದಲ್ಲದೆ, ನಿಮ್ಮ ಧೀರ್ಘಾವಧಿಯ ಕಲಿಕೆ ಹಾಗು ಬೆಳವಣಿಗೆಯನ್ನೂ ನಿರೂಪಿಸುತ್ತದೆ.

# ಈ ಘಟಕದಿಂದ ಶಾಲಾ ನಾಯಕರು ಏನನ್ನು ಕಲಿಯಬಹುದು?

- ಶಿಕ್ಷಕರ ಕಾರ್ಯಕ್ಷಮತೆಯನ್ನು ವಿಮರ್ಶಿಸುವುದು
- ಪ್ರತಿ ಶಿಕ್ಷಕರ ಕಾರ್ಯಕ್ಷಮತೆಯನ್ನು ಸೂಕ್ತವಾಗಿ ಯೋಜಿಸಿ ಉತ್ತಮಗೊಳಿಸುವುದು.
- ಕಾರ್ಯಕ್ಷಮತೆಯ ಬಗ್ಗೆ ಶಿಕ್ಷಕರೊಡನೆ ರಚನಾತ್ಮಕವಾದ ಸಭೆಗಳನ್ನು ನಡೆಸಲು ಕೆಲವು ಆಲೋಚನೆಗಳು
- ಶಿಕ್ಷಕರ ಕಾರ್ಯಕ್ಷಮತೆಯನ್ನು ಮುಂದುವರೆಸಿಕೊಂಡು ಹೋಗಲು ಕೆಲವು ಆಲೋಚನೆಗಳು

# 1 ಸುಧಾರಣೆಯ ಕ್ಷೇತ್ರಗಳ ಬಗ್ಗೆ ಅರಿವು ಮೂಡಿಸಿಕೊಳ್ಳುವುದು

*ನಿಮ್ಮ ಶಿಕ್ಷಕರಲ್ಲಿ ನಿಸ್ಸಂಶಯವಾದ ಸಾಮರ್ಥ್ಯವಿರುತ್ತದೆಯಾದರೂ, ಸುಧಾರಿಸಿಕೊಳ್ಳಬಹುದಾದ ಕ್ಷೇತ್ರಗಳೂ ಇರುತ್ತವೆ. ಶಿಕ್ಷಕರ ಉತ್ತಮ ಕಾರ್ಯಕ್ಷಮತೆಯನ್ನು ಗುರುತಿಸಿ ಅಂಗೀಕರಿಸುವುದು ಬಹಳ ಮುಖ್ಯ.- ಈ ವಿಷಯವನ್ನು ನಿರ್ದಿಷ್ಟವಾಗಿ ಮಾಡಲು ಒಂದು ಚಟುವಟಿಕೆಯನ್ನು ಈ ಘಟಕದಲ್ಲಿ ಮುಂದೆ ನೀವು ಮಾಡುತ್ತೀರ. ಆದರೆ, ಈಗ ಮೊದಲು ನಾವು, ಕಡಿಮೆ ಕಾರ್ಯಕ್ಷಮತೆಯನ್ನು ನಿಭಾಯಿಸುವುದರತ್ತ ದೃಷ್ಟಿ ಹರಿಸಬೇಕಾಗಿದೆ. ಅತ್ಯುತ್ತಮ ಶಿಕ್ಷಕರಾಗಲು ಸಂಬಂಧಿಸಿದಂತೆ ತಮ್ಮ ಕೌಶಲ, ಜ್ಞಾನ ಹಾಗು ನಡವಳಿಕೆಯನ್ನು ಶಿಕ್ಷಕರು ಸಂಪೂರ್ಣವಾಗಿ ಬಳಸಿಕೊಳ್ಳುತ್ತಿಲ್ಲ. ಇದರ ಬಗ್ಗೆ ನೀವು ಆಲೋಚಿಸಲು ಪ್ರಾರಂಭಿಸಲು ಸಹಾಯವಾಗುವಂತೆ, ಕೆಳಗೆ ನೀಡಿರುವ ಕೇಸ್ ಸ್ಟಡಿಯನ್ನು ಓದಿ ನಂತರ ಬರುವ ಚಟುವಟಿಕೆಯನ್ನು ಪೂರ್ಣಗೊಳಿಸಿ. .*

## ಕೇಸ್ ಸ್ಟಡಿ ೧. ಪ್ರಸಾದ್ ಅವರ ತರಗತಿಯ ಪರೀಕ್ಷೆ ಫಲಿತಾಂಶ

*ಎಲ್ಲಾ ವಿಷಯಗಳ ಬಗೆಗಿನ ತರಗತಿಯ ಮೊದಲ ಕಂತಿನ ಪರೀಕ್ಷೆಗಳ ಫಲಿತಾಂಶಗಳು ಹೊರಬಿದಿದ್ದವು. ಪರೀಕ್ಷೆ ಹಾಗು ಟೆಸ್ಟ್ ಫಲಿತಾಂಶಗಳನ್ನು ವಿಶ್ಲೇಶಿಸುವ ಹೊಣೆಯನ್ನು ನೀಡಿದ್ದ, ಶಾಲೆಯ ಅತ್ಯಂತ ಕರಾರುವಾಕ್ಕಿನ ಶಿಕ್ಷಕರಾದ ಶ್ರೀಮತಿ ಅಗರ್ವಾಲ್ ಅವರೊಡನೆ, ಶಾಲಾ ನಾಯಕರಾದ ಕಪೂರ್ ಕುಳಿತ್ತಿದ್ದರು.*

*'ಸ್ವಲ್ಪ ನಾಟಕೀಯವಾಗಿಯೇ ಶೀಮತಿ ಅಗರ್ವಾಲ್ ಮಾತು ಪ್ರಾರಭಿಸಿದರು " ಯಾವಾಗಿನಂತೆ, ವಿದ್ಯಾರ್ಥಿಗಳು ವಿಜ್ಞಾನದಲ್ಲಿ ಬಹಳ ಕಳಪೆಯಾಗಿ ಮಾಡಿದ್ದಾರೆ. ಶಾಲೆಯ ಫಲಿತಾಂಶಕ್ಕೆ ಈ ಬ್ಯಾಚ್ ಖಂಡಿತ ಕುಂದು ತರುತ್ತದೆ ಎಂದು ನನಗೆ ಖಂಡಿತವಾಗಿ ಗೊತ್ತು!" ಎಂದರು.*

*ಕಪೂರ್ ಅವರಿಗೆ ಸ್ವಲ್ಪ ಗೊಂದಲ ಉಂಟಾಯಿತು. ಇದೇ ಬ್ಯಾಚಿನ ವಿದ್ಯಾರ್ಥಿಗಳಿಗೆ ಅವರು ಕಳೆದ ವರ್ಷ ಪಾಠ ಮಾಡಿದ್ದರು ಹಾಗು ವಿದ್ಯಾರ್ಥಿಗಳು ಸವಾಲುಗಳಿಗೆ ಅತ್ಯುತ್ತಮವಾಗಿ ಪ್ರತಿಕ್ರಿಯಸಿದ್ದರು. ಅವರುಗಳ ಸಾಮರ್ಥ್ಯದ ಬಗ್ಗೆ ತಮಗಿದ್ದ ನೆನಪಿಗೂ ಈಗ ಬಂದಿರುವ ಫಲಿತಾಂಶಕ್ಕೂ ಹೊಂದಿಕೆ ಇರಲಿಲ್ಲ.*

*" ಎಲ್ಲಾ ವಿಜ್ಞಾನ ವಿಷಯದಲ್ಲೂ ಹೀಗಾಗಿದೆಯಾ?" ಎಂದವರು ಕೇಳಿದರು.*

*ಕಪೂರ್ ಅವರ ವಿಶ್ಲೇಶಣೆಯನ್ನು ಮೌನವಾಗಿ ಗಮನಿಸುತ್ತ, ಅವರತ್ತ ಸೊಟ್ಟ ನಗೆ ಬೀರಿ ಶ್ರೀಮತಿ ಅಗರ್ವಾಲ್ ಉತ್ತರಿಸಿದರು;, ನೀವು ಮೇಧಾವಿಗಳು! ಬಯಾಲಾಜಿಯಲ್ಲಿ ಮಾತ್ರ ಹೀಗಾಗಿದೆ. ಅದು ಪ್ರಸಾದ್ ಅವರ ವಿಷಯ. ವಿದ್ಯಾರ್ಥಿಗಳಗೆ ಅವರನ್ನು ಕಂಡರೆ ಅಷ್ಟಕಷ್ಟೆ. ಒಂದು ಕಾರಣ, ಆತ ಅತ್ಯಂತ ಜಟಿಲವಾದ ಚಿತ್ರಗಳನ್ನು, ತಮ್ಮ ಅಲುಗಾಡದ, ಸ್ಥಿರವಾದ ಕೈಗಳಿಂದ ಬಿಡಿಸುತ್ತಾರೆ... ಹಾಗೆಯೇ ಕರಾರುವಕ್ಕಾಗಿ ವಿದ್ಯಾರ್ಥಿಗಳೂ ಬರೆಯಬೇಕೆಂದು ನಿರೀಕ್ಷಿಸುತ್ತಾರೆ. ಹೌದು! ಅವರು ಇನ್ನೂ ಲೇಬಲ್ ಗಳನ್ನು ತೋರಿಸಲು ಮಾರುದದ್ದ ಸ್ಕೇಲ್ ಅನ್ನು ಬಳಸುತ್ತಾರೆ!"*

*ಯಾವುದೇ ಉತ್ತರ ನೀಡದೆ ಕಪೂರ್ ಅವರು ತಲೆ ಅಲ್ಲಾಡಿಸಿದರು. ಶಾಲೆಯ ಇತರ ಶಿಕ್ಷಕರ ಬಗ್ಗೆ ಚರ್ಚಿಸುವುದು ಅವರಿಗೆ ಖಂಡಿತ ಬೇಡವಾಗಿತ್ತು..*

*" ಧನ್ಯವಾದಗಳು ಶ್ರೀಮತಿ ಅಗರ್ವಾಲ್. ಈಗ ನಾವು ಸಮಾಜ ಶಾಸ್ತ್ರದ ಫಲಿತಾಂಶಗಳನ್ನು ನೋಡೋಣ" ಎಂದಷ್ಟೇ ಹೇಳಿದರು.*

## ಚಟುವಟಿಕೆ ೧: ಶಿಕ್ಷಕರ ಕಾರ್ಯನ್ವ ಹಣೆಯ ಬಗ್ಗೆ ವಿಷಯಗಳನ್ನು ಗುರುತಿಸುವುದು

*ಒಬ್ಬ ಶಿಕ್ಷಕರ ಕಡಿಮೆ ಕಾರ್ಯಕ್ಷಮತೆಯನ್ನು ಗುರುತಿಸಲು ಕಪೂರ್ ಅವರು ವಿದ್ಯಾರ್ಥಿಗಳ ಫಲಿತಾಂಶವನ್ನು ಬಳಸಿಕೊಂಡರು. ನಿಮ್ಮ ಶಾಲೆಯಲ್ಲಿ ಶಿಕ್ಷಕರ ಕಡಿಮೆ ಕಾರ್ಯಕ್ಷಮತೆಯ ಬಗ್ಗೆ ಅರಿವಾಗಲು ನೀವು ಯಾವ ಯಾವ ರೀತಿಯನ್ನು ಅನುಸರಿಸುತ್ತೀರಿ ಎಂಬುದರ ಬಗ್ಗೆ*

*ಯೋಚಿಸಿ. ನಿಮ್ಮ ಕಲಿಕೆಯ ಡೈರಿಯಲ್ಲಿ ೩-೪ ಆಲೋಚನೆಗಳ ಬಗ್ಗೆ ಬರಿದಿಡಿ.*

*ಈ ಪ್ರಕರಣದಲ್ಲಿ ಶಿಕ್ಷಕರ ಕಡಿಮೆ ಕಾರ್ಯಕ್ಷಮತೆ ಮತು ವಿದ್ಯಾರ್ಥಿಗಳ ಕಳಪೆ ಫಲಿತಾಂಶಗಳ ನಡುವೆ ಕಪೂರ್ ಸಂಬಂಧವನ್ನು ಕಲ್ಪಿಸಲು ಸಾಧ್ಯವಾಯಿತು. ಈ ತರಹದ ನೇರವಾದ ಸಂಬಂಧ ಯಾವಾಗಲೂ ಕಂಡು ಬರುವುದಿಲ್ಲ. ಇತರ ಅಂಶಗಳಿಗಾಗಿ ಹುಡುಕುವುದು ಮುಖ್ಯವಾಗುತ್ತದೆ.( ಉದಾ: ಅನಾರೋಗ್ಯ, ಪಠ್ಯ ಪುಸ್ತಕಗಳ ಅಲಭ್ಯತೆ, ಕಳಪೆ ಹಾಜರಾತಿ]*

*ಪ್ರತಿಯೊಂದು ಸನ್ನಿವೇಶವೂ ವಿಭಿನ್ನ, ಆದರೆ ಶಿಕ್ಷಕರ ಕಡಿಮೆ ಕಾರ್ಯಕ್ಷಮತೆಯನ್ನು ಸೂಚಿಸಬಹುದಾದ ಕೆಲವು ಸೂಚಕಗಳು ಇಲ್ಲಿವೆ.*

- *ಒಂದು ತರಗತಿಯಲ್ಲಿ ವಿದ್ಯಾರ್ಥಿಗಳ ಅನುಪಸ್ಥಿತಿ ಹೆಚ್ಚಿರುವುದು.*
- *ಒಂದು ತರಗತಿಯಲ್ಲಿ ವಿದ್ಯಾರ್ಥಿಗಳು ಆಗಾಗ ಪುಂಡಾಟಿಕೆ ಮಾಡುವುದು*
- *ಒಂದು ತರಗತಿಯಲ್ಲಿ ಪೋಷಕರು ತಮ್ಮ ಮಕ್ಕಳ ಪ್ರಗತಿಯ ಬಗ್ಗೆ ಅಸಮಧಾನ ವ್ಯಕ್ತಪಡಿಸುವುದು.*
- *ಒಂದು ನಿರ್ಧಿಷ್ಟ ತರಗತಿಯಲ್ಲಿ, ವಿದ್ಯಾರ್ಥಿಗಳು ನಿರೀಕ್ಷೆಯಂತೆ ಮುನ್ನಡೆ ಸಾಧಿಸುತ್ತಿಲ್ಲದಿರುವುದು.*
- *ಮೇಲಿನ ತರಗತಿಯಲ್ಲಿ , ವಿದ್ಯಾರ್ಥಿಗಳ ಸಾಧನೆ ಕಳಪೆಯಾಗಿದೆ ಎಂದು ಶಿಕ್ಷಕರು ದೂರುವುದು..*
- *ಇತರ ವಿಷಯಗಳಿಗೆ ಹೋಲಿಸಿದರೆ ಕೆಲವು ವಿಷಯಗಳಲ್ಲಿ ವಿದ್ಯಾರ್ಥಿಗಳು ಸಾಕಷ್ಟು ಪ್ರಗತಿ ಸಾಧಿಸುತ್ತಿಲ್ಲದಿರುವುದು.*

## 2 ಕಾರ್ಯಕ್ಷಮತೆಯ ಬಗ್ಗೆ ಸಾಕ್ಷ್ಯಾಧಾರಗಳ ಸಂಗ್ರಹ

*ಇಲ್ಲಿ ಗಮನಿಸ ಬೇಕಾದ ಒಂದು ಮುಖ್ಯ ಅಂಶವೆಂದರೆ ಶಿಕ್ಷಕರ ಕಡಿಮೆ ಕಾರ್ಯಕ್ಷಮತೆ, ಅವರು ಇತರರಿಗಿಂತ ವಿಭಿನ್ನವಾಗಿ ಬೋಧನೆ ಮಾಡುವುದು ಅಥವಾ ತಮ್ಮ ತರಗತಿಯನ್ನು ವ್ಯವಸ್ಥೆಗೊಳಿಸುವುದಕ್ಕೂ ಅಗತ್ಯವಾದ ಸಂಬಂಧವೇನಿಲ್ಲ. ಆ ಒಂದು ಸಮಯದಲ್ಲಿ ಅವರ ಬೋಧನೆ ತಮ್ಮ ಎಲ್ಲಾ ವಿದ್ಯಾರ್ಥಿಗಳಲ್ಲಿ ನಿರೀಕ್ಷಿಸಿದ ಪ್ರಗತಿ ತರಲಿಲ್ಲವೆಂಬುದು ಹೆಚ್ಚು ನಿಜ. ಉದಾಹರಣೆಗೆ, ಸಮರ್ಥ ವಿದ್ಯಾರ್ಥಿಗಳು ಅಥವಾ ಒಂದು ನಿರ್ಧಿಷ್ಟ ಸಾಂಸ್ಕೃತಿಕ ಹಿನ್ನಲೆಯಿಂದ ಬಂದ ವಿದ್ಯಾರ್ಥಿಗಳು ಉತ್ತಮ ಫಲಿತಾಂಶ ಪಡೆಯುತ್ತಾರೆ ಆದರೆ ಇತರರು ಪಡೆಯುವುದಿಲ್ಲ.*

*ನೀವು ನಿಯಮಿತವಾಗಿ ತರಗತಿಗಳಿಗೆ ಭೇಟಿ ನೀಡಿ ಅಥವಾ ಶಿಕ್ಷಕರೊಡನೆ ಮಾತಾನಾಡಿ ವಿದ್ಯಾರ್ಥಿಗಳ ಕಲಿಕೆಯ ಬಗ್ಗೆ ಅಂಕಿ ಅಂಶಗಳನ್ನು ಸಂಗ್ರಹಿಸದಿದ್ದರೆ, ವಿದ್ಯಾರ್ಥಿಯ ಶಿಕ್ಷಣದಲ್ಲಿ ತೀವ್ರ ಹಿನ್ನಡೆ ಉಂಟಾಗುವವರೆಗೂ ನಿಮಗೆ ಕಡಿಮೆ ಕಾರ್ಯಕ್ಷಮತೆಯ ಬಗ್ಗೆ ತಿಳಿಯದೇ ಇರಬಹುದು. ಈ ಕಾರಣಕ್ಕಾಗಿ, ನಿಯಮಿತವಾದ ಪರಿವೀಕ್ಷಣೆ ಅಗತ್ಯ ಹಾಗು ಇದು ನಿಮ್ಮ ಕೆಲಸದ ನಿಯತ ಕಾರ್ಯಕ್ರಮವಾಗ ಬೇಕು. ಈ ರೀತಿಯ ಪರಿವೀಕ್ಷಣೆಯಿಂದ ಉತ್ತಮ ಕಾರ್ಯಕ್ಷಮತೆಯನ್ನು ಗುರುತಿಸಿ , ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರನ್ನೂ ಗುರುತಿಸಬಲ್ಲಿರಿ.*



*ಚಿತ್ರ ೧: ಗಮನಿಸುವ ಮೂಲಕ ಸಾಕ್ಷ್ಯಾಧಾರಗಳನ್ನು ಸಂಗ್ರಹಿಸುವುದು*

*ಕಾರ್ಯಕ್ಷಮತೆಯ ಬಗ್ಗೆ ಸಾಕ್ಷ್ಯಾಧಾರಗಳನ್ನು ನೀವು ಹೇಗೆ ಸಂಗ್ರಹಿಸಬಹುದು? ಯಾವುದೇ ರೀತಿಯ ಊಹಾಪೋಹದ ಬದಲಾಗಿ, ಸಾಕ್ಷ್ಯಾಧಾರಗಳನ್ನು ಆಧರಿಸಿ ಕ್ರಮಕೈಗೊಳ್ಳುವುದು ಬಹಳ ಮುಖ್ಯ. ಆದರೆ ಸಾಮಾನ್ಯವಾಗಿ, ಇತರ ಶಿಕ್ಷಕರೊಡನೆ ಹಾಗು ಅವರ ಕಾರ್ಯಕ್ಷಮತೆಯನ್ನು ಹೋಲಿಸಿದಾಗ ಸಮಸ್ಯೆಗಳು ಉದ್ಭವಿಸುತ್ತವೆ. ಆದ್ದರಿಂದ, ಒಬ್ಬ ಶಿಕ್ಷಕರು ಅಥವಾ ಒಂದು ತರಗತಿಗಿಂತ ಹೆಚ್ಚಿನ ಶಿಕ್ಷಕರು ಹಾಗು ತರಗತಿಯ ಬಗ್ಗೆ ಸಾಕ್ಷ್ಯಾಧಾರಗಳನ್ನು ಸಂಗ್ರಹಿಸುವುದು ಅಗತ್ಯ.*

*ಸಾಕ್ಷ್ಯಾಧಾರಗಳ ಸಂಗ್ರಹಣೆ ಉದ್ದೇಶಪೂರ್ವಕವಾಗಿರ ಬೇಕು ಹಾಗು ಈ ಪ್ರಕ್ರಿಯೆ ಯಾವುದೇ ಪೂರ್ವಗ್ರಹವಿಲ್ಲದೆ ಸಮತೋಲಿತವಾಗಿರುತ್ತದೆ. ಕೆಲವು ಪ್ರಾಥಮಿಕ ಅಂಕಿ ಅಂಶಗಳನ್ನು ಸಂಗ್ರಹಿಸಿದ ಮೇಲೆ, ಏನಾಗುತ್ತಿದೆ ಎಂದು ಸರಿಯಾಗಿ ತಿಳಿಯಲು, ಹೆಚ್ಚಿನ ಮಾಹಿತಿಯನ್ನು ಪಡೆಯಬೇಕು.*

- *ಅನೇಕ ತರಗತಿಗಳಿಂದ ಪ್ರಗತಿಯ ಅಂಕಿ ಅಂಶಗಳನ್ನು ಪಡೆಯುವುದು*
- *ಬೋಧನೆ ಮತ್ತು ಕಲಿಕೆಯನ್ನು ವೈಯಕ್ತಿಕವಾಗಿ ಗಮನಿಸುವುದು*
- *ತಮ್ಮ ಅನುಭವಗಳ ಬಗ್ಗೆ ವಿದ್ಯಾರ್ಥಿಗಳ ಜೊತೆ ಮಾತನಾಡುವುದು. ಆದರೆ ನೀವು ಕೇಳುವ ಪ್ರಶ್ನೆಗಳು ಅಥವಾ ಅದಕ್ಕೆ ವಿದ್ಯಾರ್ಥಿಗಳು ನೀಡುವ ಉತ್ತರಗಳು, ಶಿಕ್ಷಕರ ಸಾಮರ್ಥ್ಯದ ಬಗ್ಗೆ ಯಾವುದೇ ರೀತಿಯ ಸಂದೇಹಗಳನ್ನು ಉಂಟು ಮಾಡದಂತೆ ಅತ್ಯಂತ ಎಚ್ಚರವಹಿಸಬೇಕು.*

*ಇಲ್ಲಿ ನೆನಪಿಡಬೇಕಾದ ಮುಖ್ಯ ಅಂಶವೆಂದರೆ, ಇದು ಶಿಕ್ಷಕರ ನಡವಳಿಕೆಯ ಒಂದು ಅಂಶ ಮಾತ್ರವಾಗಿದ್ದು , ಇಲ್ಲಿ ಶಿಕ್ಷಕರು ತಾವೇ ಒಂದು ಸಮಸ್ಯೆಯಾಗಿರುವುದಿಲ್ಲ. ನೀವು ವ್ಯಕ್ತಿಯ ಯೋಗ್ಯತೆಯನ್ನು ನಿರ್ಧರಿಸುತ್ತಿಲ್ಲ, ಅವರ ಬೋಧನೆ ನಡವಳಿಕೆಯನ್ನು ನಿರ್ಧರಿಸುತ್ತಿದ್ದೀರ- ಚಟುವಟಿಕೆ ೧ರಲ್ಲಿ ಕಂಡಂತೆ.*

## ಚಟುವಟಿಕೆ ೧: ನೀವು ಯಾವುದರ ಬಗ್ಗೆ ನಿರ್ಣಯಿಸುತ್ತಿದ್ದೀರಿ?

*ಒಬ್ಬ ಶಿಕ್ಷಕರ ಸಾಮರ್ಥ್ಯವನ್ನು ನೋಡುವಾಗ, ಅವರನ್ನು ಒಬ್ಬ ವ್ಯಕ್ತಿಯಾಗಲ್ಲದೆ, ಅವರಲ್ಲಿನ ವೃತ್ತಿಪರ ನಡವಳಿಕೆಯನ್ನು ಗಮನಿಸುವುದು ಮುಖ್ಯ. ಒಂದು ತರಗತಿಯನ್ನು ೧೦ ನಿಮಿಷಗಳ ಕಾಲ ಗಮನಿಸಿ, ಶಿಕ್ಷಕರು ಎಷ್ಟು ಜನ ವಿದ್ಯಾರ್ಥಿಗಳನ್ನು ಮಾತನಾಡಿಸುತ್ತಾರೆ ಎಂಬುದನ್ನು ಬರೆದುಕೊಳ್ಳುವುದು.*

1. *ಶಿಕ್ಷಕರ ಉಡುಗೆ ತೊಡುಗೆಯ ಬಗ್ಗೆ ವಿದ್ಯಾರ್ಥಿಗಳ ಟೀಕೆ ಟಿಪ್ಪಣಿಗಳು*
2. *ಪಕ್ಕದ ತರಗತಿಗೆ ಒಬ್ಬ ಶಿಕ್ಷಕರು ನಿರ್ಧಿಷ್ಟ ಸಮಯಕ್ಕಿಂತ ಯಾವಾಗಲು ಹತ್ತು ನಿಮಿಷ ತಡವಾಗಿ ಬರುತ್ತಾರೆಂದು ಮತ್ತೊಬ್ಬ ಶಿಕ್ಷಕರಿಂದ ದೂರು.*
3. *ಒಂದು ತರಗತಿಯನ್ನು ಇಪ್ಪತ್ತು ನಿಮಿಷಗಳ ಕಾಲ ಗಮನಿಸಿ, ಶಿಕ್ಷಕರು ಎಷ್ಟು ಮುಕ್ತ ಪ್ರಶ್ನೆಗಳನ್ನು ಕೇಳುತ್ತಾರೆಂದು ಬರೆದುಕೊಳ್ಳುವುದು.*
4. *ಒಮ್ಮೊಮ್ಮೆ ತಮಗೆ ಇತರರಿಗಿಂತ ವಿಭಿನ್ನ ಕೆಲಸವಿರುತ್ತದೆ ಎಂಬುದರ ಬಗ್ಗೆ ವಿದ್ಯಾರ್ಥಿಗಳಿಂದ ಹೇಳಿಕೆಗಳು.*
5. *ಶಿಕ್ಷಕರು ಬೇರೆ ಪ್ರದೇಶದವರು ಎಂದು ಪೋಷಕರಿಂದ ಟೀಕೆ.*

***ಚರ್ಚೆ***

*ಇಲ್ಲಿ ಕೆಲವು ಅವು ಮೊದಲು ಕಂಡಷ್ಟು ಸ್ಪಷ್ಟವಾಗಿಲ್ಲ*

- *ಆಯ್ಕೆ ೧, ೪ ಮತ್ತು ೫, ಶಿಕ್ಷಕರ ನಡವಳಿಕೆಯನ್ನು ಸ್ಪಷ್ಟವಾಗಿ ಬಿಂಬಿಸುತ್ತವೆ*

- *ಆಯ್ಕೆ ೨ ಸೂಕ್ತವಾಗಿಲ್ಲ ಹಾಗು ಉಡುಗೆ ತೊಡುಗೆ ಖಂಡಿತವಾಗಿ ಅನುಚಿತವಾಗಿದ್ದ ಪಕ್ಷದಲ್ಲಿದ್ದರೆ ಮಾತ್ರ, ಇದು ಅನ್ವಯಿಸುತ್ತದೆ. ಇದು ಸ್ಪಷ್ಟವಾಗಿ ವ್ಯಕ್ತಿಯ ವಿರುದ್ಧವಾಗಿದೆ. ಈ ರೀತಿಯ ಟೀಕೆಗಳನ್ನು ಪ್ರೋತ್ಸಾಹಿಸಬಾರದು.*
- *ಆಯ್ಕೆ ೩ ಇದೇ ರೀತಿಯಾಗಿದೆ ಆದರೆ ನಿಮಗೆ ಪೂರ್ವಗ್ರಹದ ಬಗ್ಗೆ ಅರಿವಿರಬೇಕು ಮತ್ತು ಕ್ರಮ ಕೈಗೊಳ್ಳುವ ಮೊದಲು ಇನ್ನೂ ಹೆಚ್ಚಿನ ಪುರಾವೆಗಳನ್ನು ಸಂಗ್ರಹಿಸಬೇಕು.*
- *ಆಯ್ಕೆ ೬ ಅಸಹಿಷ್ಣುತೆಯನ್ನು ಸ್ಪಷ್ಟವಾಗಿ ತೋರಿಸುತ್ತದೆ, ಆದರೆ ಶಿಕ್ಷಕರ ಉಚ್ಚಾರಣೆ ವಿಬಿನ್ನವಾಗಿ ಬಲವಾಗಿದ್ದು ವಿದ್ಯಾರ್ಥಿಗಳಿಗೆ ಅರ್ಥ ಮಾಡಿಕೊಳ್ಳಲು ಕಷ್ಟವಾಗಿರಬಹುದು. ಮತ್ತೆ ಇಲ್ಲಿಯೂ ಇನ್ನು ಹೆಚ್ಚಿನ ವಿಚಾರಣೆ ಅಗತ್ಯ.*

*ನಿಮ್ಮ ಶಾಲೆಯಲ್ಲಿ ಸಾಕ್ಷ್ಯಾಧಾರಗಳನ್ನು ಹೇಗೆ ಸಂಗ್ರಹಿಸಬಹುದೆಂದು ಸೂಚಿಸುವ ಚಟುವಟಿಕೆ ೩ ಅನ್ನು ಪ್ರಯತ್ನಿಸಿ.*

## ಚಟುವಟಿಕೆ ೩: ನಿಮ್ಮ ಶಾಲೆಯಲ್ಲಿ ಸಾಕ್ಷ್ಯಾಧಾರಗಳನ್ನು ಸಂಗ್ರಹಿಸುವುದು ಹೇಗೆ?

ನಿಮ್ಮ ಶಾಲೆಯಲ್ಲಿ ಬೋಧನೆಯ ಬಗ್ಗೆ ನೀವು ಚಿಂತಾಕ್ರಾಂತರಾಗಿದ್ದರೆ, ಆ ಸಮಸ್ಯೆಯ ಬಗ್ಗೆ ಇನ್ನೂ ಹೆಚ್ಚು ಅರ್ಥಮಾಡಿಕೊಳ್ಳಲು ಮತ್ತು ಅದಕ್ಕೆ ಕಾರಣಗಳನ್ನು ತಿಳಿಯಲು ಸಾಕ್ಷ್ಯಾಧಾರಗಳನ್ನು ಹೇಗೆ ಸಂಗ್ರಹಿಸುವುದೆಂಬುದರ ಬಗ್ಗೆ ಈಗ ಯೋಚಿಸಿ. ನೀವು ಸಂಗ್ರಹಿಸಬಹುದಾದಂತಹ ಸಾಕ್ಷ್ಯಾದಾರಗಳು ಹಾಗು ಅದನ್ನು ಸಂಗ್ರಹಿಸುವಾಗ ನಿಮಗೆ ಉಂಟಾಗಬಹುದಾದಂತಹ ಸಮಸ್ಯೆಗಳ ಬಗ್ಗೆ ನಿಮ್ಮ ಕಲಿಕೆ ಡೈರಿಯಲ್ಲಿ ಟಿಪ್ಪಣಿ ಬರೆದಿಟ್ಟುಕೊಳ್ಳಿ.

**ಚರ್ಚೆ**

ನೀವು ಯಾವ ರೀತಿಯ ಸಾಕ್ಷ್ಯಾಧಾರಗಳ ಬಗ್ಗೆ ನಿರ್ಧರಿಸಿದ್ದೀರಿ ಎಂಬುದು ನಮಗೆ ಸ್ಪಷ್ಟವಾಗಿಲ್ಲ. ಆದರೆ ಸಮಸ್ಯೆಗಳು ಒಂದೇ ರೀತಿಯಾಗಿರುವ ಸಾಧ್ಯತೆ ಹೆಚ್ಚಿರುತ್ತದೆ.

- ಶಿಕ್ಷಕರು ನಿಮ್ಮ ಉದ್ದೇಶದ ಬಗ್ಗೆ ಅನುಮಾನ ಪಡಬಹುದು ಹಾಗು ನೀವು ತರಗತಿಯನ್ನು ಪ್ರವೇಶಿಸುವ ಬಗ್ಗೆ ಅಸಮಾಧಾನ ವ್ಯಕ್ತಪಡಿಸಬಹುದು.
- ನಿಮ್ಮ ಇರುವಿಕೆಯಿಂದ ವಿದ್ಯಾರ್ಥಿಗಳು ವಿಭಿನ್ನ ರೀತಿಯಲ್ಲಿ ನಡೆದುಕೊಳ್ಳಬಹುದು.
- ನಿಮ್ಮ ಚಟುವಟಿಕೆಯ ಬಗ್ಗೆ ವಿದ್ಯಾರ್ಥಿಗಳು ತಮ್ಮ ಪೋಷಕರಿಗೆ ವರದಿ ಮಾಡಿದರೆ, ಅವರಿಂದ ಆಕ್ಷೇಪಣೆ ಉಂಟಾಗಬಹುದು.

ನೀವು ನಿಯಮಿತವಾಗಿ ನಿಮ್ಮ ಶಾಲೆಯಲ್ಲಿ ಸಾಕ್ಷ್ಯಾಧಾರಗಳನ್ನು ಸಂಗ್ರಹಿಸುವುದನ್ನು ಮುಂದುವರೆಸಿದರೆ, ಎಲ್ಲರಲ್ಲೂ ಅದರ ಬಗ್ಗೆ ಕುತೂಹಲ ಹಾಗು ಆಕ್ಷೇಪ ಕಡಿಮೆಯಾಗುತ್ತದೆ- ಆದರೆ ಪ್ರಾರಂಭದಲ್ಲಿ ನೀವು ಅವರೆಲ್ಲರಿಗೂ ಧೈರ್ಯ ನೀಡುವಂತಿರಬೇಕು. ಒಬ್ಬರಿಗಿಂತ ಹೆಚ್ಚು ಶಿಕ್ಷಕರು ಹಾಗು ಒಂದಕ್ಕಿಂತ ಹೆಚ್ಚು ತರಗತಿಯಿಂದ ಸಾಕ್ಷ್ಯಾಧರಗಳನ್ನು ಸಂಗ್ರಹಿಸುವುದರಿಂದ ಇತರರಲ್ಲಿ ಕೇಂದ್ರೀಕೃತವಾದ ಗಮನ ಸ್ವಲ್ಪ ಕಡಿಮೆಯಾಗುತ್ತದೆ. ಈ ಸಾಕ್ಷ್ಯಾಧಾರ ಸಂಗ್ರಹ ಪ್ರಕ್ರಿಯೆ ಇನ್ನು ಹೆಚ್ಚು ಸಹಕಾರಿಯಾಗಲು, ಯಾವುದರ ಬಗ್ಗೆ ಫೀಡ್ ಬ್ಯಾಕ್ ( ಮರುಮಾಹಿತಿ) ಬೇಕೆಂದು ಶಿಕ್ಷಕರನ್ನು ಕೇಳುವುದರ ಮೂಲಕ ಅವರನ್ನೂ ತೊಡಗಿಸಿಕೊಳ್ಳಬಹುದು.

Iನಿಮ್ಮ ಆತಂಕಗಳನ್ನು ಇತರ ಶಾಲಾ ನಾಯಕರೊಡನೆ ಹಂಚಿಕೊಳ್ಳುವುದು ಬಹಳ ಉಪಯೋಗಕರವಾಗಬಹುದು. ಅವರ ಬಳಿ ಸಂಭಾವ್ಯ ಸಮಸ್ಯೆಗಳಿಗೆ ಉಪಯುಕ್ತ ಪರಿಹಾರಗಳಿವೆಯೇ ಅಥವಾ ವಿವಿಧ ರೀತಿಯ ಸಾಕ್ಷ್ಯಾಧಾರಗಳಿವೆಯೇ ಎಂದು ತಿಳಿದುಕೊಳ್ಳಲು ಇದು ಸಹಕಾರವಾಗುತ್ತದೆ.

# 3 ಸಾಕ್ಷ್ಯಾಧಾರಗಳನ್ನು ಸಂಗ್ರಹಿಸುವಲ್ಲಿನ ಸಮಸ್ಯೆಗಳು

ಈಗ ಕೆಳಗೆ ನೀಡಿರುವ ಎರಡು ಕೇಸ್ ಸ್ಟಡಿಗಳನ್ನು ಓದಿ ಮತ್ತು ಅದಕ್ಕೆ ಸಂಬಂಧಿಸಿದ ಚಟುವಟಿಕೆಗಳನ್ನು ಪೂರ್ಣಗೊಳಿಸಿ. ಕಡಿಮೆ ಕಾರ್ಯಕ್ಷಮತೆ ಬಗ್ಗೆ ಸಾಕ್ಷ್ಯಾಧಾರಗಳನ್ನು ಸಂಗ್ರಹಿಸುವುದು ಎಷ್ಟು ಕಷ್ಟವೆಂಬುವುದನ್ನು ಇವು ಸೂಚಿಸುತ್ತದೆ.

## ಕೇಸ್ ಸ್ಟಡಿ ೧: ರಾವುಲ್ ಅವರಿಂದ ವಿದ್ಯಾರ್ಥಿಗಳ ಪುಸ್ತಕಗಳ ವಿಮರ್ಶೆ

ಆಗಷ್ಟೇ ಅನಾರೋಗ್ಯ ರಜೆಯಿಂದ ಹಿಂದಿರುಗಿದ್ದ ತಮ್ಮ ಸಹಾಯಕರಾದ ಶ್ರೀಮತಿ ಚಡ್ಡಾ ಅವರೊಡನೆ, ಶಾಲೆಯ ನಾಯಕರಾದ ರಾವುಲ್ ಅವರು, ಶಾಲೆಯ ಬೋಧನೆ ಮತ್ತು ಕಲಿಕೆಯ ಪದ್ದತಿಯ ಬಗ್ಗೆ ಸಾಕ್ಷ್ಯಾಧಾರಗಳನ್ನು **ಸಂಗ್ರಹಿಸುವುದರಲ್ಲಿ** ತಾವು ಎದುರಿಸಿದ ಕಷ್ಟಗಳ ಬಗ್ಗೆ ಹಂಚಿಕೊಂಡರು. ಶ್ರೀಮತಿ ಚಡ್ಡಾ ಅನರೋಗ್ಯವೆಂದು ಹೇಳುವ ಒಂದು ದಿನದ ಹಿಂದೆ, ತಾವು ಎಲ್ಲಾ ಶಿಕ್ಷಕರಿಗೆ ತಮ್ಮ ತಮ್ಮ ತರಗತಿಯ ವಿದ್ಯಾರ್ಥಿಗಳ ಕ್ಲಾಸ್ ವರ್ಕ್ ಮತ್ತು ಹೋಂವರ್ಕ್ ನ ಕೆಲವು ಮಾದರಿಗಳನ್ನು ಸಂಗ್ರಹಿಸಲು ಹೇಳಿದ್ದನ್ನು ರಾವುಲ್ ನೆನಪಿಸಿದರು. " ಎರಡು ವಾರಗಳ ಕಾಲ ಸತತವಾಗಿ ನಾನು ನಿರಂತರವಾಗಿ ಎಲ್ಲರನ್ನೂ ಕೇಳುತ್ತಿದ್ದು ನಂತರ ಎಲ್ಲರು ತಂದುಕೊಟ್ಟರು" ಎಂದು ರಾವುಲ್ ದೂರಿದರು. ; ' ನಿಮಗೆ ಈ ಕೆಲಸವನ್ನು ಒಪ್ಪಿಸಿದ್ದರೆ ಈ ಕೆಲಸ ಎಷ್ಟು ಸುಲಭವಾಗುತ್ತಿತ್ತು! ನೀವು ಏನೇ ಹೇಳಿದರು ಅದನ್ನು ಅವರುಗಳು ಹೆಚ್ಚು ಸುಲಭವಾಗಿ ಮಾಡುತ್ತಾರೆ".

ಇದನ್ನು ಕೇಳಿ ನಕ್ಕ ಶ್ರೀಮತಿ ಚಡ್ಡಾ ಅವರು, ಆ ಪುಸ್ತಕಗಳು ರಾವುಲ್ ಅವರಿಗೆ ಏಕೆ ಬೇಕಾಗುತ್ತೆಂದು ಪ್ರಶ್ನಿಸಿದಾಗ, ರಾವುಲ್ ತಾವು ಎಲ್ಲಾ ಪುಸ್ತಕಗಳನ್ನು ಪರಿಶೀಲಿಸಿದ್ದು, ವಿದ್ಯಾರ್ಥಿಗಳು ಮಾಡಿದ ಕೆಲಸವನ್ನು ಶಿಕ್ಷಕರು ಪರೀಕ್ಷಿಸಿದ್ದಾರೋ ಇಲ್ಲವೊ ಹಾಗು ವಿದ್ಯಾರ್ಥಿಗಳ ಬಗ್ಗೆ ಯಾವ ರೀತಿಯ ಫೀಡ್ ಬ್ಯಾಕ್ ಅನ್ನು ನೀಡಲಾಗಿದೆ ಎಂಬುದನ್ನು ತಾವು ದಾಖಲಿಸಿಕೊಂಡಿರುವುದಾಗಿ ಹೇಳಿದರು. ತಮಗೆ ಆ ಪುಸ್ತಕಗಳು ಏತಕ್ಕಾಗಿ ಬೇಕಾಗಿತ್ತೆಂಬ ಕಾರಣವನ್ನು ಶಿಕ್ಷಕರೊಡನೆ ಹಂಚಿಕೊಂಡಿದ್ದಿರಾ ಎಂದು ರಾವುಲ್ ಅವರನ್ನು ಕೇಳಿದಾಗ, ಹೌದೆಂದು ಅವರು ದೃಢಪಡಿಸಿದರು.

"ಹಾಗಿದ್ದರೆ, ನೀವು ಸಂಗ್ರಹಿಸಿದ ಮಾಹಿತಿಯನ್ನು ನೀವು ಹೇಗೆ ಬಳಸಿಕೊಳ್ಳುತ್ತೀರಾ ಎಂಬುದರ ಬಗ್ಗೆ ಅವರಿಗೆ ಚಿಂತೆ ಉಂಟಾಗಿರುವ ಸಾಧ್ಯತೆ ಇದೆ" ಎಂದು ಶ್ರೀಮತಿ ಚಡ್ಡಾ ಹೇಳಿದರು.

ಇದರ ಬಗ್ಗೆ ತಮಗೆ ಅರಿವಿದ್ದರೂ, ಸುಳ್ಳು ನೆಪ ಹೇಳಿ ಪುಸ್ತಕಗಳನ್ನು ತೆಗೆದುಕೊಳ್ಳುವುದು ತಮಗೆ ಇಷ್ಟವಿರಲಿಲ್ಲವೆಂದು ರಾವುಲ್ ಹೇಳಿದರು. ಸುಳ್ಳು ನೆಪ ಹೇಳುವುದು ಸರಿಯಿಲ್ಲವೆಂದು ಶ್ರೀಮತಿ ಚಡ್ಡಾ ಒಪ್ಪಿಕೊಂಡರಾದರೂ, ರಾವುಲ್ ಅವರು ಹೆಚ್ಚು ಆತ್ಮವಿಶ್ವಾಸವಿರುವ ಕೆಲವು ಶಿಕ್ಷಕರೊಂದಿಗೆ ಈ ಪ್ರಕ್ರಿಯೆಯನ್ನು ಪ್ರಾರಂಭಿಸಬಹುದಿತ್ತೆಂಬ ಸಲಹೆಯನ್ನು ನೀಡಿದರು. ಶಾಲೆಯ ನಾಯಕರೊಡನೆ ನಡೆದ ಚರ್ಚೆ ಬಹಳ ಸ್ವಾರಸ್ಯಕರವಾಗಿಯೂ ಉಪಯುಕ್ತವಾಗಿಯೂ ಇತ್ತೆಂಬ ಸುದ್ಧಿ ಹರಡುತ್ತಿದ್ದಂತೆಯೇ, ಪುಸ್ತಕಗಳನ್ನು ಸಂಗ್ರಹಿಸಿ ಅವರ ಬಳಿ ತರಲು ಇನ್ನು ಹೆಚ್ಚು ಶಿಕ್ಷಕರಿಗೆ ಧೈರ್ಯ ಬರುತಿತ್ತೆಂದು ಶ್ರೀಮತಿ ಚಡ್ಡಾ ಅಭಿಪ್ರಾಯ ಪಟ್ಟರು. ಇದಕ್ಕೆ ತಮ್ಮ ಸಮ್ಮತಿ ಸೂಚಿಸಿದ ರಾವುಲ್ ಅವರು, ಇದರಲ್ಲಿನ ಅಂಶವನ್ನು ಗುರುತಿಸಿದ್ದೇನೆ. ಕೆಲಸ ಮಾಡುವ ಹೊಸ ವಿಧಾನವನ್ನು ಪರಿಚಯಿಸುವಾಗ, ಎಲ್ಲರಿಗೂ ಕಾಯುವ ಬದಲು, ಕೆಲವು ಶಿಕ್ಷಕರೊಂದಿಗೆ ಪ್ರಾರಂಭಿಸುವುದು ಉತ್ತಮವೆಂದು ಅವರು ಅಭಿಪ್ರಾಯ ಪಟ್ಟರು.

' "ಈಗ ನಾನು ಪುಸ್ತಕದಲ್ಲಿ ಕಂಡು ಬಂದಂತಹ ಅಂಶಗಳನ್ನು ದೃಡಪಡಿಸಿಕೊಳ್ಳಲು ತರಗತಿಗಳಲ್ಲಿ ಕುಳಿತು ಗಮನಿಸಲು ನಿರ್ಧರಿಸಿರುವುದರಿಂದ, ನಿಮ್ಮ ಸಲಹೆಯನ್ನು ನಾನು ತೆಗೆದುಕೊಳ್ಳುತ್ತೇನೆ. ಎಲ್ಲರಿಗಿಂತ ಮೊದಲು ಶ್ರೀಮತಿ ಚಕ್ರಬೋರ್ತಿ ನನಗೆ ತಮ್ಮ ವಿದ್ಯಾರ್ಥಿಗಳ ಪುಸ್ತಕಗಳನ್ನು ತಂದುಕೊಟ್ಟರು. ಆದ್ದರಿಂದ ಬಹುಶ: ನಾನು ಮೊದಲು ಅವರ ತರಗತಿಯನ್ನು ಗಮನಿಸುವುದರಿಂದ ಪ್ರಾರಂಭಿಸುತ್ತೇನೆ"

ತಮ್ಮ ತರಗತಿಗೆ ಏಕೆ ಬರುತ್ತಿದ್ದಾರೆ ಎಂದು ತಿಳಿದರೆ, ರಾವುಲ್ ಅವರು ತರಗತಿಯಲ್ಲಿ ಕುಳಿತುಕೊಳ್ಳುವುದು ಶ್ರೀಮತಿ ಚಕ್ರಬೋರ್ತಿಗೆ ಖುಷಿಯಾಗುತ್ತದೆ ಎಂದು ಶ್ರೀಮತಿ ಚಡ್ಡಾ ಒಪ್ಪಿಕೊಂಡರು.

'"ಬಹುಶ: ನಿಮ್ಮ ವಿದ್ಯಾರ್ಥಿಗಳ ಪುಸ್ತಕಗಳನ್ನು ಅವರಿಗೆ ನೀಡಿ, ನೀವು ಪಾಠ ಮಾಡುತ್ತಿ ರುವಾಗ ನಿಮ್ಮ ತರಗತಿಯಲ್ಲಿ ಕುಳಿತು ಗಮನಿಸಿ ಎಂದು ನೀವು ಶ್ರೀಮತಿ ಚಕ್ರಬೋರ್ತಿಗೆ ಹೇಳಿದರೆ ಇನ್ನೂ ಉತ್ತಮವಾಗಿರುತ್ತದೆ" ಎಂದು ಶ್ರೀಮತಿ ಚಡ್ಡಾ ವಿಚಾರಮಗ್ನರಾಗಿ ಹೇಳಿದರು.

ಶ್ರೀಮತಿ ಚಕ್ರಬೋರ್ತಿಗೆ ಇದು ತುಂಬ ಇಷ್ಟವಾಗುತ್ತದೆಂದು – ಹಾಗೆಯೇ ಇತರ ಶಿಕ್ಷಕರಿಗೂ ಇಷ್ಟವಾಗುತ್ತದೆ ಎಂದು ಹೇಳಿ ರಾವುಲ್ ನಕ್ಕರು. "

ಸಮಸ್ಯೆಗಳನ್ನು ಎದುರಿಸಲು ಸ್ವಾರಸ್ಯಕರ ಮಾರ್ಗಗಳಿವೆ ನಿಮ್ಮ ಬಳಿ' ಎಂದು ಶ್ರೀಮತಿ ಚಡ್ಡಾ ಅವರನ್ನು ಅಭಿನಂದಿಸಿದರು.



**ಚಿತ್ರ ೨: ಸಾಕ್ಷ್ಯಾಧಾರಗಳ ಸಂಗ್ರಹಣೆ**

## ಚಟುವಟಿಕೆ ೪: ನೀವು ಸಾಕ್ಷ್ಯಾಧಾರಗಳನ್ನು ಸಂಗ್ರಹಿಸುವುದನ್ನು ಮಾರ್ಪಡಿಸುವುದು

ಕೇಸ್ ಸ್ಟಡಿ ೨ ಅನ್ನು ಓದಿ, ಚಟುವಟಿಕೆ ೩ ರಲ್ಲಿ ನಿಮ್ಮ ಯಾವುದಾದರು ಯೋಜನೆ ಅಥವಾ ನಿಲುವನ್ನು ಬದಲಿಸಿಕೊಳ್ಳುತ್ತೀರಾ? ಇಲ್ಲಿ ನೀವು ಅರಿತುಕೊಂಡಿರಬಹುದು- ಸಾಕ್ಷ್ಯಾಧಾರಗಳ ಸಂಗ್ರಹಕ್ಕಿಂತ ಅದನ್ನು ಹೇಗೆ ಸಂಗ್ರಹಿಸುತ್ತೀರಿ ಎಂಬುದು ಹೆಚ್ಚು ಮುಖ್ಯವಾಗುತ್ತದೆ.- ನೀವು ಹೇಗೆ ಇದರ ಬಗ್ಗೆ ಜನರಿಗೆ ತಿಳುಸಿತ್ತೀರಿ ಮತ್ತು ಅವರಲ್ಲಿ ದುರ್ಬಲವಾದ ಭಾವನೆಯನ್ನು ಹೇಗೆ ಮೂಡಿಸುತ್ತೀರಿ ಎಂಬುದು. .

ನೀವು ಸಾಕ್ಷ್ಯಾಧಾರಗಳನ್ನು ಹೇಗೆ ಸಂಗ್ರಹಿಸುತ್ತೀರಿ ಎಂಬುದರತ್ತ ಸ್ವಲ್ಪ ಆಲೋಚಿಸುವುದು ಒಳಿತು. ಉದಾಹರಣೆಗೆ, ತರಗತಿಯಲ್ಲಿ ಕುಳಿತು ಗಮನಿಸುವಾಗ ಎಷ್ಟು ಸಮಯ ಬೇಕಾಗುತ್ತದೆ ಎಂಬುದನ್ನು ಆಲೋಚಿಸಬಹುದು. ಶಿಕ್ಷಕರು ಪಾಠ ಮಾಡುತ್ತಿರುವಾಗ ಹೆಚ್ಚು ತೊಂದರೆಯಾಗದಂತೆ ಸಾಮಾನ್ಯವಾಗಿ ಹತ್ತು ನಿಮಿಷಗಳ ಕಾಲ ಗಮನಿಸಿದರೆ ಸಾಕಾಗುತ್ತದೆ.

ನಿಮ್ಮ ಶಾಲೆಯಲ್ಲಿ ನೀವು ಸಾಕ್ಷ್ಯಾಧಾರಗಳನ್ನು ಸಂಗ್ರಹಿಸಲು ಪ್ರಾರಂಭಿಸಿದಾಗ ನೀವು ಮಾಡಬೇಕಾದ, ಮಾಡಬಾರದಂತ ಅಂಶಗಳ ಬಗ್ಗೆ ಕಲಿಕೆ ಡೈರಿಯಲ್ಲಿ ಒಂದು ಪಟ್ಟಿಯನ್ನು ಮಾಡಿ.

## ಕೇಸ್ ಸ್ಟಡಿ ೩: ಗಣಿತದ ಪರೀಕ್ಷೆಯ ಅಂಕಗಳನ್ನು ಶ್ರೀಮತಿ ವೈದ್ಯ ವಿಶ್ಲೇಷಿಸುತ್ತಾರೆ

ಮಧ್ಯಂತರ ಪರೀಕ್ಷೆಗಳಲ್ಲಿ ಕಂಡು ಬಂದ ಫಲಿತಾಂಶಗಳನ್ನು, ಶಾಲೆಯ ನಾಯಕರಾದ ಶ್ರೀಮತಿ ವೈದ್ಯ ಅಧ್ಯಯನ ಮಾಡಿದರು. ಗಣಿತದಲ್ಲಿ ವಿದ್ಯಾರ್ಥಿಗಳು ಗಳಿಸಿದ ಅಂಕಗಳ ಬಗ್ಗೆ ಸ್ಟಾಫ್ ರೂಂನಲ್ಲಿ ನಡೆದ ಚರ್ಚೆಯು ಅವರ ಕಿವಿಗೆ ಬಿದ್ದಿತ್ತು. ಗಣಿತದ ಶಿಕ್ಷಕರಾಗಿದ್ದ ಶ್ರೀ ಶರ್ಮಾರವರು ಹೀಗೆಳೆಯುವ ರೀತಿಯಲ್ಲಿ ಹನ್ನೊಂದನೆಯ ತರಗತಿಯಲ್ಲಿ ಕೆಲವೇ ಕೆಲವು ಹುಡುಗಿಯರಿಗೆ ಗಣಿತ ಅರ್ಥವಾಗುತ್ತದೆ ಎಂದೂ ಇತರರನ್ನು ಅಂತಿಮ ಪರೀಕ್ಷೆಯಲ್ಲಿ ಉತ್ತೀರ್ಣಗೊಳಿಸಲು ಪ್ರಯತ್ನಿಸುವುದು ಬಹಳ ಕಷ್ಟವಾಗುತ್ತದೆ ಎಂದು ಎಚ್ಚರಿಸಿದರು.

ಶರ್ಮರವರಿಗೆ ಏಕೆ ಇಷ್ಟು ಚಿಂತೆಯಾಗಿದೆ ಎಂದು ಶ್ರೀಮತಿ ವೈದ್ಯ ಅವರಿಗೆ ಅರ್ಥವಾಯಿತು—ಗಣಿತದ ಪರೀಕ್ಷೆಯಲ್ಲಿ ಅರ್ಧಕ್ಕಿಂತ ಹೆಚ್ಚು ವಿದ್ಯಾರ್ಥಿಗಳು ೧೦೦ಕ್ಕೆ ೫-೪೫ ಅಂಕಗಳನ್ನು ಮಾತ್ರ ಪಡೆದಿದ್ದರು. ನಂತರ ಅವರು ಗಣಿತದಲ್ಲಿ ಇತರ ತರಗತಿಗಳ ವಿದ್ಯಾರ್ಥಿಗಳು ಹೇಗೆ ಮಾಡಿದ್ದಾರೆಂದು ನೋಡಿದರು. ಒಂಬತ್ತನೆಯ ತರಗತಿಯ ವಿದ್ಯಾರ್ಥಿಗಳು ಅಷ್ಟೇನು ಚೆನ್ನಾಗಿ ಮಾಡಿರಲಿಲ್ಲವಾದರು, ಹತ್ತು ಮತ್ತು ಹನ್ನೆರಡನೆಯ ವಿದ್ಯಾರ್ಥಿಗಳು ಚೆನ್ನಾಗಿ ಮಾಡಿದ್ದರು. ವರ್ಷದ ಕೊನೆಯಲ್ಲಿ ನಡೆಯುವ ಸಾರ್ವತ್ರಿಕ ಪರೀಕ್ಷೆಯ ತಯಾರಿಯಲ್ಲಿ ಇವರೆಲ್ಲ

ಟ್ಯೂಷನ್ ಗೆ ಹೋಗುತ್ತಿದ್ದಾರೆಂಬುದಕ್ಕೆ ಇದು ಪುರಾವೆಯೇ ಎಂದು ಅವರು ಯೋಚಿಸಿದರು.

ಇಲ್ಲಿ ಶ್ರೀಮತಿ ವೈದ್ಯ ಅವರಿಗೆ ಒಂದು ಸ್ಪಷ್ಟ ವಿನ್ಯಾಸ ಕಂಡು ಬಂತು.. ಉದಾಹರಣೆಗೆ ಪ್ರತಿ ತರಗತಿಯಲ್ಲಿ ಅತ್ಯಂತ ಹೆಚ್ಚು ಅಂಕ ಗಳಿಸಿದವರು ಸ್ಪಷ್ಟವಾಗಿ ಉತ್ತಮವಾಗಿದ್ದರು. ಇವರುಗಳು ಗಳಿಸಿದ ಅಂಕಗಳು ೬೦-೧೦೦ರೊಳಗಿದ್ದವು. ಲ೦-೬೦ರೊಳಗಿನ ಅಂಕಗಳಲ್ಲಿ ಸ್ಪಷ್ಟವಾಗಿ ಗೋಚರವಾಗುವ ಅಂತರವಿತ್ತು. ತರಗತಿಯ ಐದನೆಯ ಒಂದು ಭಾಗ ೩೦-ಲ೦ ನಡುವೆ ಅಂಕಗಳನ್ನು ಪಡೆದಿತ್ತು. ಇನ್ನುಳಿದ ಐದರ ಒಂದು ಭಾಗ ೪೦-೩೦ರ ನಡುವೆ ಅಂಕಗಳನ್ನು ಪಡೆದಿತ್ತು.

ತಮ್ಮ ಹಸಿರು ಇಂಕಿನ ಲೇಖನಿಯನ್ನು ತೆಗೆದುಕೊಂಡು ಶ್ರೀಮತಿ ವೈದ್ಯ, ಚೆನ್ನಾಗಿ ಅಂಕಗಳನ್ನು ಗಳಿಸುತ್ತಿರುವ ವಿದ್ಯಾರ್ಥಿಗಳನ್ನು ಗುರುತಿಸಲು ಪ್ರಾರಂಭಿಸಿದರು. ೧೦೦ಕ್ಕೆ ೩೫ಕ್ಕಿಂತ ಕಡಿಮೆ ಅಂಕ ಪಡೆದ ವಿದ್ಯಾರ್ಥಿಗಳನ್ನು ಗುರುತಿಸಲು ಕೆಂಪು ಇಂಕಿನ ಲೇಖನಿಯನ್ನು ಬಳಸಿದರು. ಅವರು ಒಬ್ಬ ಗಣಿತದ ಶಿಕ್ಷಕರೊಡನೆ ಮುಖ್ಯವಾದ ಸಂವಾದವನ್ನು ನಡೆಸಬೇಕಿತ್ತು ಹಾಗು ಅದಕ್ಕಾಗಿ ಅವರಿಗೆ ಬಲವಾದ ಅಂಕಿ ಅಂಶಗಳ ಸಾಕ್ಷ್ಯಾಧಾರಗಳ ಅಗತ್ಯವಿತ್ತು. ಅಂಕಿ ಅಂಶಗಳನ್ನಲದೆ, ಕಡೆಯ ವರ್ಗದಲ್ಲಿ ಬರುವ, ಕಡಿಮೆ ಅಂಕಗಳನ್ನು ಗಳಿಸಿದ ವಿದ್ಯಾರ್ಥಿಗಳ ವ್ಯಕ್ತಿಚಿತ್ರಣಗಳನ್ನು ಸಹ ಮಾಡಿಕೊಂಡರು. ನಂತರ ಶಿಕ್ಷಕರ ಸಹಾಯದಿಂದ ಈ ವಿದ್ಯಾರ್ಥಿಗಳು ಯಾವ ಕ್ಷೇತ್ರಗಳಲ್ಲಿ ಅಶಕ್ತರಾಗಿದ್ದಾರೆ ಹಾಗೆಯೇ ಯಾವ ಕ್ಷೇತ್ರಗಳಲ್ಲಿ ಬಲವಾಗಿದ್ದಾರೆಂದು ಗುರುತಿಸುತ್ತಾರೆ. ಈ ತರಹದ ಹಿನ್ನಲೆ ಕೆಲಸ ಮಾಡುವುದರಿಂದ , ನಿಶ್ಯಕ್ತ ವಿದ್ಯಾರ್ಥಿಗಳಿಗೆ ಶಾಲೆಯ ನಂತರ ಕಾರ್ಯಕ್ರಮವನ್ನು ರೂಪಿಸುವುದರಲ್ಲಿ ನೆರವಾಗುತ್ತದೆ. ಈ ರೀತಿಯ ಕಾರ್ಯಕ್ರಮ ದಿಂದ ಎಷ್ಟು ಉಪಯೋಗವಾಗುತ್ತದೆ ಎಂದು ಅವರು ವಿಜ್ಞಾನದ ವಿಷಯದಲ್ಲಿ ಈಗಾಗಲೆ ಕಂಡುಕೊಂಡಿದ್ದರು. ನಿರ್ಧಿಷ್ಟ ವಲಯಗಳಲ್ಲಿ ಕೇಂದ್ರೀಕೃತವಾದ ಬೆಂಬಲದಿಂದ ಭೌತಶಾಸ್ತ್ರದ ಫಲಿತಾಂಶ ಈಗಾಗಲೇ ಸುಧಾರಿಸಿತ್ತು.

## ಚಟುವಟಿಕೆ ೫: ಒಂದು ತರಗತಿಕಿಂತ ಹೆಚ್ಚಿನ ತರಗತಿಯಿಂದ ಕನಿಷ್ಟ ಎರಡು ರೀತಿಯ ಸಾಕ್ಷ್ಯಾಧಾರಗಳನ್ನು ಸಂಗ್ರಹಿಸುವುದು.

ಕೇಸ್ ಸ್ಟಡಿ ೧ ಮತ್ತು ೨ ರಲ್ಲಿರುವ ಕೆಲವು ಉದಾಹರಣೆಯಿಂದ ತಿಳಿದುಕೊಂಡು, ವಿದ್ಯಾರ್ಥಿ ಕಲಿಕೆಯ ಬಗ್ಗೆ ಒಂದಕ್ಕಿಂತ ಹೆಚ್ಚಿನ ತರಗತಿಯಿಂದ ಕನಿಷ್ಟ ಎರಡು ಸಾಕ್ಷ್ಯಾಧಾರಗಳನ್ನಾದರೂ ಸಂಗ್ರಹಿಸಿ. ಈ ಸಾಕ್ಷ್ಯಾಧಾರದ ನಕಲನ್ನು ನಿಮ್ಮಲ್ಲಿ ಇಟ್ಟುಕೊಂಡಿರುವುದನ್ನು ಖಚಿತಪಡಿಸಿಕೊಳ್ಳಿ. ನಿಮ್ಮ ಶಾಲೆಯಲ್ಲಿ ಶಿಕ್ಷಕರ ಕಾರ್ಯಕ್ಷಮತೆಯ ಪರಿವೀಕ್ಷಣೆ ಮಾಡಲು ಈ ಚಟುವಟಿಕೆ ನಿಮಗೆ ನೆರವಾಗುತ್ತದೆ.

ನೀವು ಗಮನಿಸಿದ ಯಾವುದೇ ಅನಿರಿಕ್ಷಿತ ಸ್ವರೂಪದ ಬಗ್ಗೆ ನಿಮ್ಮ ಕಲಿಕೆ ಡೈರಿಯಲ್ಲಿ ಟಿಪ್ಪಣಿ ಬರೆದಿಟ್ಟುಕೊಳ್ಳಿ. ಟಿಪ್ಪಣಿ ಬರೆದುಕೊಳ್ಳುವಾಗ, ನೀವು ನಿರೀಕ್ಷಿಸಿದಕ್ಕಿಂತ ಈ ಪ್ರಕ್ರಿಯೆ ಸುಲಭವಾಗಿತ್ತೋ ಕಷ್ಟಕರವಾಗಿತ್ತೋ ಎಂದು ಯೋಚಿಸಿ. ನೀವು ಎದುರು ನೋಡದ ಸಂಗತಿಗಳೇನಾದರು ಕಂಡು ಬಂತ ಎಂದೂ ಯೋಚಿಸಿ. ನಿಮ್ಮ ಆಲೋಚನೆಗಳನ್ನು ದಾಖಲಿಸಿ- ಅವಕಾಶ ದೊರೆತಾಗ, ನಿಮ್ಮ ಸಹದ್ಯೋಗಿಗಳೊಡನೆ ಚರ್ಚಿಸಲು ಇದು ನೆರವಾಗುತ್ತದೆ.

**ಚರ್ಚೆ**

ಇಲ್ಲಿ ಮತ್ತೊಮ್ಮೆ ನಮಗೆ ನೀವು ಯಾವ ಸಾಕ್ಷ್ಯಾಧಾರಗಳನ್ನು ಸಂಗ್ರಹಿಸಿದ್ದೀರಿ ಅಥವಾ ಯಾವ ಅನಿರೀಕ್ಷಿತ ಸ್ವರೂಪವನ್ನು ಗಮನಿಸಿದ್ದೀರಿ ಎಂಬುದು ನಮಗೆ ತಿಳಿದಿಲ್ಲ. ಆದರೆ ಇಡೀ ವಿಚಾರಣೆಯ ಪ್ರಕ್ರಿಯೆಯಲ್ಲಿ ಇದು ಒಂದು ಭಾಗ ಮಾತ್ರವಾಗುವ ಸಾಧ್ಯತೆ ಇದೆ ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳುವುದು ಮುಖ್ಯ. ಅನೌಪಚಾರಿಕ ಅವಲೋಕನಗಳು ( ಗಮನಿಸುವುದು) ಅನೇಕ ಬಾರಿ ಸಂಪೂರ್ಣ ಚಿತ್ರಣವನ್ನು ನೀಡುವುದಿಲ್ಲ. ಎರಡು ಸಾಕ್ಷ್ಯಾಧಾರಗಳು ಇದ್ದರೂ ಸಹ, ಚಿತ್ರಣ ಭಾಗಶ: ಮಾತ್ರವಿರುತ್ತದೆ.

# ೪. ಫೀಡ್ ಬ್ಯಾಕ್ ಅನ್ನು ನೀಡುವುದು

ಸಾಕ್ಷ್ಯಾಧಾರಗಳ ಸಂಗ್ರಹಣೆ ಶಿಕ್ಷಕರಿಗೆ ಒಂದು ಸೂಕ್ಷ್ಮ ವಿಷಯವಾಗಬಹುದು; ಅಂತೆಯೇ ರಚನಾತ್ಮಕ ಫೀಡ್ ಬ್ಯಾಕ್ ನೀಡುವುದು ಸಹ ಸೂಕ್ಷ್ಮವಾಗುತ್ತದೆ. ಕಡಿಮೆ ಕಾರ್ಯಕ್ಷಮತೆಯನ್ನು ಪ್ರದರ್ಶಿಸುತ್ತಿರುವ ಶಿಕ್ಷಕರಿಗೆ ಫೀಡ್ ಬ್ಯಾಕ್ ನೀಡುವುದು ಹೆಚ್ಚಿನ ಆದ್ಯತೆಯ ವಿಷಯವೆಂದು ನಿಮಗೆ ಅನಿಸಿದರೂ ಸಹ, ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರಿಗೆ ಸಕರಾತ್ಮಕ ಫಿಡ್ ಬ್ಯಾಕ್ ನೀಡುವುದು ಅಷ್ಟೇ ಮುಖ್ಯವಾಗುತ್ತದೆ- ಇದರಿಂದ ಅವರ ಕೆಲಸದ ಕ್ರಮದಲ್ಲಿ ಎಷ್ಟು ಮೌಲ್ಯ ನೀಡುತ್ತೀರಿ ಎಂದು ಅವರಿಗೆ ತಿಳಿಯುತ್ತದೆ. ಶಿಕ್ಷರನ್ನು ಪ್ರೇರೇಪಿಸುವುದರಲ್ಲಿ ಹಾಗು ಅವರನ್ನು ಇನ್ನು ಹೆಚ್ಚು ಶ್ರಮಿಸಲು ಪ್ರೋತ್ಸಾಹಿಸುವಲ್ಲಿ ಇದು ಅತ್ಯಂತ ಮುಖ್ಯವಾಗುತ್ತದೆ. ಫೀಡ್ ಬ್ಯಾಕ್ ಶಿಕ್ಷಕರಿಗೆ ಅಮೂಲ್ಯವಾಗಲು, ನಿಮ್ಮ ಸಕರಾತ್ಮಕ ಫೀಡ್ ಬ್ಯಾಕ್ ನಿರ್ಧಿಷ್ಟವಾಗಿದ್ದು, ನಿಮ್ಮ ಅವಲೋಕನವನ್ನು ಆಧರಿಸಿರಬೇಕು. ಉದಾಹರಣೆಗೆ:

- ’ ನೀವು ವಿದ್ಯಾರ್ಥಿಗಳಿಗೆ ನೀಡುವ ಸೂಚನೆಗಳು ಬಹಳ ಸ್ಪಷ್ಟವಾಗಿವೆ. ಮತ್ತೆ ಅವರು ಗುಂಪಿನಲ್ಲಿ ಕೆಲಸ ಮಾಡುವಾಗ, ನೀವು ಹೆಚ್ಚು ಸಲಹೆ ನೀಡುವುದನ್ನು ನಾನು ಗಮನಿಸಿದ್ದೇನೆ.’
- ತರಗತಿಯಲ್ಲಿ ಹೊಸ ವಿಷಯಗಳನ್ನು ಪ್ರದರ್ಶಿಸಿರುವುದನ್ನು ನಾನು ಗಮನಿಸಿದ್ದೇನೆ. ತಮ್ಮ ಕೆಲಸದ ಬಗ್ಗೆ ಹೆಮ್ಮೆ ಪಟ್ಟುಕೊಳ್ಳಲು ವಿದ್ಯಾರ್ಥಿಗಳಿಗೆ ಇದು ನಿಜವಾಗಲು ಪ್ರೋತ್ಸಾಹಿಸುತ್ತದೆ ಎಂದು ನನ್ನ ಅನಿಸಿಕೆ”
- ಮೊಗಸಾಲೆಯಲ್ಲಿ ಗಣಿತದ ತರಗತಿಯ ಬಗ್ಗೆ ಇಬ್ಬರು ವಿದ್ಯಾರ್ಥಿಗಳು ಮಾತನಾಡುತ್ತಿರುವುದನ್ನು ನಾನು ಕೇಳಿಸಿಕೊಂಡೆ-ನೀವು ಅವರಿಗೆ ನೀಡಿದ ಲೆಕ್ಕವೊಂದರ ಬಗ್ಗೆ ತುಂಬಾ ತಲೆಕೆಡಿಸಿಕೊಂಡಿದ್ದರು. ನೀವು ಅವರಿಗೆ ನಿಜವಾಗಿ ಸ್ಫೂರ್ತಿ ನೀಡಿದ್ದೀರಾ ಎಂದನಿಸುತ್ತದೆ”‘
- ನಿಮ್ಮ ತರಗತಿಯಲ್ಲಿ ಹುಡುಗಿಯರ ಪರೀಕ್ಷೆ ಫಲಿತಾಂಶ ಶೇ೨೫ರಿಂದ ಹೆಚ್ಚಿದೆ- ಅಭಿನಂದನೆಗಳು!”

ಹೆಚ್ಚು ಸಕರಾತ್ಮಕವಲ್ಲದ ಫೀಡ್ ಬ್ಯಾಕ್ ನೀಡಲು ನಿಮಗೆ ಕಷ್ಟವಾಗಬಹುದು- ಆದರೆ ಸಾಕ್ಷ್ಯಾಧಾರಗಳನ್ನುಆಧರಿಸಿ ಫೀಡ್ ಬ್ಯಾಕ್ ನೀಡಿದರೆ ಬಹಳ ಸಹಾಯಕಾರಿಯಾಗುತ್ತದೆ. ಕೇಸ್ ಸ್ಟಡಿ ೪ ಮತ್ತು ಚಟುವಟಿಕೆ ೪ ಸಾಕ್ಷ್ಯಾಧಾರ ಸಂಗ್ರಹಣೆ ಪ್ರಕ್ರಿಯೆಯತ್ತ ಗಮನ ಹರಿಸುತ್ತದೆ ಮತ್ತು ಕಡಿಮೆ ಕಾರ್ಯಕ್ಷಮತೆಯನ್ನು ಪ್ರದರ್ಶಿಸುತಿರುವ ಶಿಕ್ಷಕರಿಗೆ ಹೇಗೆ ಫೀಡ್ ಬ್ಯಾಕ್ ನೀಡಬೇಕೆಂಬುದು ಹೇಳುತ್ತದೆ. ಸೂಕ್ತ ಫೀಡ್ ಬ್ಯಾಕ್ ನೀಡಲು ಹೇಗೆ ಸಿದ್ಧತೆ ಮಾಡಿಕೊಳ್ಳಬೇಕೆಂದು ಇವೆರಡೂ ನಿಮಗೆ ತಿಳಿಸುತ್ತದೆ.

## ಕೇಸ್ ಸ್ಟಡಿ ೪: ಒಬ್ಬ ಶಿಕ್ಷರ ಬಗ್ಗೆ ಸಾಕಾಷ್ಯಾದರಗಳನ್ನು ಶಾಲೆಯ ನಾಯಕ ಖಾನ್ ಅವರು ಸಂಗ್ರಹಿಸುತ್ತಾರೆ.

ಒಂದು ಗುರುವಾರದಂದು, ಶಾಲೆಯ ನಾಯಕರಾದ ಖಾನ್ ಅವರು, ಶಾಲೆಯ ಸುತ್ತ ತಮ್ಮ ನಿತ್ಯದ ವಿಹಾರಕ್ಕೆ ತೆರೆಳಿದ್ದರು. ಈ ವಾರ ತರಗತಿಗಳು ಶುರುವಾಗುವಾಗ ಸಾಕ್ಷ್ಯಾಧಾರಗಳನ್ನು ಸಂಗ್ರಹಿಸುವುದಾಗಿ ಹಿಂದಿನ ಸೋಮವಾರವೇ ಅವರು ನಿರ್ಧರಿಸಿದ್ದರು. ಮುಂದಿನ ಪೀರಿಯಡ್ ಗಾಗಿ ಬೆಲ್ ಹೊಡೆಯುವ ಎರಡು ನಿಮಿಷದ ಮೊದಲು, ಅವರು ಶಾಲೆಯ ಮೊಗಸಾಲೆಯ ಒಂದು ಕೊನೆಯಲ್ಲಿ ನಿಂತು ತರಗತಿಯ ಎರಡೂ ಬದಿಯ ಮೊಗಸಾಲೆಯಲ್ಲಿ ನಡೆಯುವ ಚಟುವಟಿಕೆಯನ್ನು ಗಮನಿಸಬಹುದಾಗಿತ್ತು. ಬೆಲ್ ಹೊಡೆಯುತ್ತಿದ್ದಂತೆ, ತಾವುಗಳು ಇದ್ದ ತರಗತಿಯಿಂದ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಹೊರಬಂದು, ಹೊಸ ಪಾಠ ಶುರುವಾಗುವ ತರಗತಿಯನ್ನು ಪ್ರವೇಶಿಸುವುದನ್ನು ಖಾನ್ ಗಮನಿಸುತ್ತಿದ್ದರು.

ಆದರೆ ಇಂದು ಖಾನ್ ಅವರ ಗಮನ, ಪ್ರತಿ ದಿನ ತರಗತಿಯಿಂದ ಹೊರ ಬರಲು ಹಾಗು ಮತ್ತೊಂದು ತರಗತಿಯೊಳಗೆ ಹೋಗಲು ತುಂಬಾ ಸಮಯ ತೆಗೆದುಕೊಳ್ಳುತ್ತಿದ್ದ ಆ ಒಬ್ಬ ವ್ಯಕ್ತಿಯತ್ತ ಹರಿದಿತ್ತು. ಈ ವ್ಯಕ್ತಿ ಹಿಂದಿ ಶಿಕ್ಷಕ ಮೆಹ್ತಾ ಆಗಿದ್ದರು. ಇಂದೂ ಸಹ ಎಂದಿನಂತೆ ಒಬ್ಬ ಶಿಕ್ಷಕರು ಹೊರನಿಂತು ಮೆಹ್ತಾ ಅವರು ತಮ್ಮ ತರಗತಿಯಿಂದ ಹೊರಬರುವುದನ್ನೇ ಕಾಯುತ್ತಾ ಅಹನೆಯಿಂದ ಚಡಪಡಿಸುತ್ತಿದ್ದರು.. ಮೆಹ್ತಾ ಅವರು ತರಗತಿಯಿಂದ ಹೊರಬಂದು ಮೊಗಸಾಲೆಯಲ್ಲಿ ಕಾಲೆಳೆದುಕೊಂಡು ನಡೆದುಕೊಂಡು ಬರುತ್ತಿದ್ದನ್ನೂ ಸಹ ಖಾನ್ ಗಮನಿಸಿದರು. ತಾವು ಹೋಗಬೇಕಾದ ತರಗತಿಯ ಮುಂದೆ ಹಾದು ಹೋದರೂ, ಮೆಹ್ತಾ ಒಳಗೆ ಹೋಗದೆ ನೇರವಾಗಿ ಸ್ಟಾಫ್ ರೂಂಗೆ ತೆರೆಳಿದರು.

೫ ನಿಮಿಷಗಳ ನಂತರ, ನಿಧಾನವಾಗಿ ಸ್ಟಾಫ್ ರೂಂನಿಂದ ಹೊರ ಬಂದ ಮೆಹ್ತಾ ತರಗತಿಯತ್ತ ನಡೆದರು. ಇಷ್ಟರಲ್ಲಿ ಅವರ ತರಗತಿಯಲ್ಲಿ ವಿದ್ಯಾರ್ಥಿಗಳು ಮಾಡುತ್ತಿದ್ದ ಗಲಾಟೆಯಿಂದಾಗಿ, ಅಕ್ಕಪಕ್ಕದ ತರಗತಿಯವರು ಗಾಳಿ ಬೆಳಕು ಇಲ್ಲದಿದ್ದರೂ ಚಿಂತೆಯಿಲ್ಲವೆಂಬಂತೆ ತಮ್ಮ

ಕೊಠಡಿಗಳ ಬಾಗಿಲುಗಳನ್ನು ಹಾಕಿಕೊಂಡಿದ್ದರು.

ಖಾನ್ ಮೆಹ್ತ ಅವರನ್ನು ತರಗತಿಯೊಳಗೆ ಹಿಂಬಾಲಿಸಿದರು. ಎಂದಿನಂತೆ ಅವರು ತರಗತಿಯ ಹಿಂದಿನ ಬೆಂಚುಗಳತ್ತ ನಡೆದರು ಹಾಗು ವಿದ್ಯಾರ್ಥಿಗಳು ಅವರಿಗೆ ತಕ್ಷಣ ಕುಳಿತುಕೊಳ್ಳಲು ಜಾಗ ಮಾಡಿಕೊಟ್ಟರು. ಖಾನ್ ತಮ್ಮೆದುರಿಗಿದ್ದ ವಿದ್ಯಾರ್ಥಿಯೊಬ್ಬನ ಪುಸ್ತಕವನ್ನು ಗಮಿನಿಸಿದರು- ಮುಂದಿನ ಪೀರಿಯಡ್ ವಿಜ್ಞಾನದ ವಿಷಯವಾಗಿದ್ದು, ಅದರ ಹೋಂ ವರ್ಕ್ ಮುಗಿಸುವಲ್ಲಿ ಆ ವಿದ್ಯಾರ್ಥಿ ಮಗ್ನನಾಗಿದ್ದ. ವಿದ್ಯಾರ್ಥಿಗಳು ತಮ್ಮ ಹಿಂದಿ ಹೋಂ ವರ್ಕ್ ಅನ್ನು ತಕ್ಷಣ ತಮಗೆ ತೋರಿಸಬೇಕೆಂದು ಹೇಳುವ ಮೂಲಕವೇ ಮೆಹ್ತಾ ಪಾಠ ಪ್ರಾರಂಭಿಸಿದರು. ಯಾರು ಹೋಂ ವರ್ಕ್ ಮಾಡಿರಲಿಲ್ಲವೋ ಅವರೆಲ್ಲರನ್ನೂ ನಿಂತುಕೊಳ್ಳಲು ಹೇಳಿದರು. ಅರ್ಧಕರ್ಧ ತರಗತಿ ಎದ್ದು ನಿಂತಿತು. ಖಾನ್ ತಮ್ಮ ಗಡಿಯಾರ ನೋಡಿಕೊಂಡರು, ಆಗಲೆ ತರಗತಿ ಪ್ರಾರಂಭವಾಗಿ ೧೦ ನಿಮಿಷಗಳಾಗಿತ್ತು.. ಮೆಹ್ತಾ ಅವರು ಹೋಂ ವರ್ಕ್ ಎಷ್ಟು ಮುಖ್ಯವೆಂದು ಪ್ರವಚನ ನೀಡುತ್ತಲೇ ಇದ್ದರು. ಹೋಂ ವರ್ಕ್ ಮಾಡಿ ತಮ್ಮ ಪುಸ್ತಕಗಳನ್ನು ಮೇಹ್ತ ಅವರಿಗೆ ನೀಡಿದ್ದ ಹುಡುಗರನ್ನು ಖಾನ್ ಗಮನಿಸಿದಾಗ ಅವರೆಲ್ಲಾ ಅಸಹನೆಯಿಂದ ಚಡಪಡಿಸುತ್ತಿದ್ದದ್ದು ಕಂಡು ಬಂದರು. ಖಾನ್ ಮೌನವಾಗಿ ತರಗತಿಯಿಂದ ಹೊರನಡೆದು ತಮ್ಮ ಕೊಠಡಿಗೆ ತೆರಳಿದರು. ಮುಂದೆ ತಾವು ನಡೆಸಬೇಕಾದ ಕಷ್ಟಕರವಾದ ಮಾತುಕತೆಗೆ ಅವರು ಸಿದ್ದರಾಗುತ್ತಿದ್ದರು.

ಸಂಪನ್ಮೂಲ ೧, ' ಪರಿವೀಕ್ಷಣೆ ಮತ್ತು ಫೀಡ್ ಬ್ಯಾಕ್ ನೀಡುವುದು' ನಿಮಗೆ ಉಪಯುಕ್ತವಾಗಬಹುದು. ನಿಮ್ಮ ಶಿಕ್ಷಕರೊಂದಿಗೆ ನೀವು ತೆಗೆದುಕೊಳ್ಳುವ ನಿಲುವಿಗೆ ಅಲ್ಲಿ ಸ್ಪಷ್ಟವಾದ ಸಾಮ್ಯವಾದ ಸಂಗತಿಗಳಿವೆ.



ಚಿತ್ರ ೩: ಕಡಿಮೆ ಕಾರ್ಯಕ್ಷಮತೆ ಪ್ರದರ್ಶಿಸುವ ಶಿಕ್ಷಕರಿಗೆ ನೀವು ಫೀಡ್ ಬ್ಯಾಕ್ ಅನ್ನು ಹೇಗೆ ನೀಡುತ್ತೀರಿ?

## ಚಟುವಟಿಕೆ ೬: ಕಡಿಮೆ ಕಾರ್ಯಕ್ಷಮತೆ ಪ್ರದರ್ಶಿಸುವ ಶಿಕ್ಷಕರಿಗೆ ಫೀಡ್ ಬ್ಯಾಕ್ ನೀಡುವುದು

ಮೆಹ್ತಾ ಅವರಿಗೆ ಫೀಡ್ ಬ್ಯಾಕ್ ಹೇಗೆ ನೀಡುವುದು ಎಂಬುದರ ಬಗ್ಗೆ ಆಲೋಚಿಸಿ. ಕೆಳಗಿನ ವಿಷಯಗಳ ಬಗ್ಗೆ ಟಿಪ್ಪಣಿ ಮಾಡಿಕೊಳ್ಳಿ

- ಮಾತುಕತೆಯನ್ನು ಹೇಗೆ ಪ್ರಾರಂಭಿಸುತ್ತೀರಿ
- ನೀವು ಚರ್ಚಿಸಬೇಕಾದ ಮುಖ್ಯ ಅಂಶಗಳು

ನೀವು ನೀಡಬೇಕಾದ ಫೀಡ್ ಬ್ಯಾಕ್ ಅನ್ನು ಸೂಕ್ತ ರೀತಿಯಲ್ಲಿ ಮೊದಲೇ ರಚಿಸಿಕೊಂಡಿದ್ದರೆ ಉತ್ತಮ- ಮೊದಲು ಸಕರಾತ್ಮಕ ಅಂಶವನ್ನು ಹೇಳಿ ನಂತರ ಸುಧಾರಿಸಿಕೊಳ್ಳಲು ಸಲಹೆ ನೀಡುವ ಕ್ರಮ ಉಚಿತವಾಗಿರುತ್ತದೆ. ಕೊನೆಯಲ್ಲಿ ಒಂದು ಸಕರಾತ್ಮಕ ಅಂಶವಿದ್ದರೆ, ಮುಂದಿನ ಭೇಟಿಗೆ ಸಮ್ಮತಿ ಸೂಚಿಸುವ ಸಾಧ್ಯತೆ ಹೆಚ್ಚಿರುತ್ತದೆ.

**ಚರ್ಚೆ**

ಕೇಸ್ ಸ್ಟಡಿ ೪ರಲ್ಲಿ ನಮಗೆ ತಿಳಿಯದ ಕೆಲವು ಹಿನ್ನಲೆ ಸಂಗತಿಗಳಿರಬಹುದು- ಉದಾಹರಣೆಗೆ ಮೆಹ್ತಾ ಅವರ ಈ ಹಿಂದಿನ ಉತ್ತಮ ಕಾರ್ಯಕ್ಷಮತೆ ಅಥವಾ ಕುಟುಂಬದಲ್ಲಿ ಇತ್ತೀಚೆಗೆ ಸಂಭವಿಸಿದ ಸಾವು. ಇದರ ಬಗ್ಗೆ ಖಾನ್ ಅವರಿಗೆ ತಿಳಿದಿದ್ದು, ಅವರು ತಮ್ಮ ಫೀಡ್ ಬ್ಯಾಕ್ ನಲ್ಲಿ ಇದನ್ನು

ಗಣನೆಗೆ ತೆಗೆದುಕೊಳ್ಳುತ್ತಾರೆ. ಈಗ ಸಧ್ಯಕ್ಕೆ ಇಂತಹ ಸಂದರ್ಭಗಳಿಗಾಗಿ ಯೋಜಿಸಲು ಆಗುವುದಿಲ್ಲವಾದರೂ, ಫೀಡ್ ಬ್ಯಾಕ್ ನೀಡುವಾಗ ಅತ್ಯಂತ ನಯವಾಗಿ ಪ್ರಾರಂಭಿಸುವುದು ಸಹಾಯಕರವಾಗುತ್ತದೆ. " ನಾನು ಆ ದಿನ ಗಮನಿಸಿದ ಪಾಠದ ಪ್ರಾರಂಭದ ಬಗ್ಗೆ ಸ್ವಲ್ಪ ಹೇಳಿ' ಅಥವಾ ಈ ರೀತಿಯಾಗಿ ಹೇಳಿ ಪ್ರಾರಂಭಿಸುವುದರಿಂದ , ಆ ಶಿಕ್ಷಕರು ಆ ದಿನ ಏಕೆ ವ್ಯತ್ಯಾಸವಾಗಿತ್ತು ಅಥವಾ ಪ್ರಾರಂಭ ರೂಡಿಯಂತೆ ಏಕಿರಲಿಲ್ಲ ಅಥವಾ ಆ ದಿನ ಏನು ವಿಭಿನ್ನವಾಗಿತ್ತೆಂದು ವಿವರಿಸಲು ಸುಲಭವಾಗುತ್ತದೆ.

ಪ್ರಾರಂಭದ ನಂತರ, ನಿಮ್ಮ ಅವಲೋಕನವನ್ನು ಇನ್ನು ಸ್ವಲ್ಪ ಹೆಚ್ಚು ವಿವರವಾಗಿ ಪರೀಕ್ಷಿಸಲು ಮುಂದುವರೆಯಬಹುದು- ವಿಶೇಷವಾಗಿ ಪಾಠವನ್ನು ಪ್ರಾರಂಭಿಸಿದ ರೀತಿಯ ಬಗ್ಗೆ ಶಿಕ್ಷಕರು ಹೆಚ್ಚು ತಲೆ ಕೆಡೆಸಿಕೊಂಡಿರದಿದ್ದರೆ. ಇಲ್ಲಿ ಮುಖ್ಯವಾದ ವಿಷವೆಂದರೆ, ವಿದ್ಯಾರ್ಥಿಗಳಿಗೆ ನಷ್ಟವಾದ ಕಲಿಕೆಯ ಅವಧಿ. ಪಾಠ ತಡವಾಗಿ ಪ್ರಾರಂಭವಾಯಿತು, ಸುಧಾರಿಸಿಕೊಳ್ಳಲು ಸ್ವಲ್ಪ ಸಮಯ ಹಿಡಿಸಿತು, ನಂತರ ಹೋಂ ವರ್ಕ್ ಬಗ್ಗೆ ಭಾಷಣ- ಇವೆಲ್ಲವೂ ಅಮೂಲ್ಯವಾದ ಸಮಯವನ್ನು ಕಬಳಿಸಿಬಿಟ್ಟಿತ್ತು. ಶಿಕ್ಷಕರಿಗೆ ಫೀಡ್ ಬ್ಯಾಕ್ ನೀಡುವಾಗ ಇವೆಲ್ಲ ದರ ಬಗ್ಗೆ ಕೇಂದ್ರೀಕೃತವಾದ ಒಂದು ಸೂಕ್ತ ಸಲಹೆ- -- ಕಲಿಕೆಯ ಸಮಯವನ್ನು ಹೇಗೆ ಗರಿಷ್ಟಗೊಳಿಸುವುದು ಮತ್ತು ಇದನ್ನು ಸಾಧ್ಯಗೊಳಿಸಲು, ನೀವು ಗಮನಿಸಿದ ನಡವಳಿಕೆಯನ್ನು ಬದಲಿಸಿಕೊಳ್ಳುವ ಅಗತ್ಯ.

ನಿಮ್ಮ ಶಿಕ್ಷಕರೊಡನೆ ಮಾತನಾಡುವಾಗ ನೀವು ನೀಡಬೇಕಾದ ಫೀಡ್ ಬ್ಯಾಕ್ ಬಗ್ಗೆ ಆಲೋಚಿಸಿ  ಸೂಕ್ತವಾಗಿ ಯೋಜಿಸಲು ಸಮಯ ತೆಗೆದುಕೊಳ್ಳದೇ ಇರಲು ಯಾವುದೇ ಕಾರಣಗಳಿಲ್ಲವೆಂಬುದನ್ನು ನೀವು ಮನಗಾಣಬೇಕು. ಫೀಡ್ ಬ್ಯಾಕ್ ನೀಡುವುದು ಒಂದು ಕಲೆ ಹಾಗು ಇದನ್ನು ಸತತ ಅಭ್ಯಾಸದಿಂದ ಬೆಳೆಸಿಕೊಳ್ಳಬಹುದು. ಆದ್ದರಿಂದ ನಿರ್ಧಿಷ್ಟವಾದ ಅಭಿಪ್ರಾಯವನ್ನು ನೀಡಲು, ಮೊದಲೇ ಕೆಲವು ಟಿಪ್ಪಣಿಗಳನ್ನು ಮಾಡಿಕೊಳ್ಳುವುದು ನೆರವಾಗುತ್ತದೆ.

ಇದರ ಬಗ್ಗೆ ನಡೆದ ಸಂಶೋಧನೆಯ ಬಗ್ಗೆ ಮುರಳಿಧರನ್ ಮತ್ತು ಸುಂದರರಾಮನ್ ( ೨೦೧೦) ನೀಡಿರುವ ವರದಿಯ ಪ್ರಕಾರ, ಶಿಕ್ಷಕರಿಗೆ ಅವರ ಕೆಲಸದ ಕಾರ್ಯಕ್ಷಮತೆಯ ಬಗ್ಗೆ ಕೇವಲ ಫೀಡ್ ಬ್ಯಾಕ್ ನೀಡುವುದು ಸಾಕಾಗುವುದಿಲ್ಲ . ಇತರ ತರಗತಿಗಳಿಗೆ ಹೋಲಿಸಿದರೆ ತಮ್ಮ ತರಗತಿಯ ವಿದ್ಯಾರ್ಥಿಗಳು ಹೆಚ್ಚು ಉತ್ತಮವಾಗಿ ಮುನ್ನಡೆಯುತ್ತಿಲ್ಲವೆಂಬ ಅಂಶವನ್ನು ಫೀಡ್ ಬ್ಯಾಕ್ ಒಳಗೊಂಡಿದ್ದರೂ ಸಹ ಇದು ಸಾಕಾಗುವುದಿಲ್ಲ. ಮುಂದಿನ ತರಗತಿಗಳಲ್ಲಿ ಅವಲೋಕನ ನಡೆದಾಗ ಶಿಕ್ಷಕರು ತಮ್ಮ  ಬೋಧನೆಯ ನಡವಳಿಕೆಯನ್ನು ಬದಲಾಯಿಸಿಕೊಂಡಿದ್ದು ಕಂಡುಬಂದರೂ ಸಹ, ವಿದ್ಯಾರ್ಥಿಗಳ ಫಲಿತಾಂಶಗಳಲ್ಲಿ ಯಾವುದೇ ಸುಧಾರಣೆ ಕಂಡು ಬರಲಿಲ್ಲ. ತಮ್ಮ ಬೋಧನೆ ನಡವಳಿಕೆಯನ್ನು ಶಾಶ್ವತವಾಗಿ ಬದಲಾಯಿಸಿಕೊಳ್ಳಲು ಶಿಕ್ಷಕರಿಗೆ ಇನ್ನೂ ಹೆಚ್ಚಿನ ಸಲಹೆಗಳು, ಪ್ರೇರೇಪಣೆ ಅಥವಾ ಮನವೊಲಿಕೆ ಅಗತ್ಯವಿದೆ ಎಂದು ಅವರು ಅಭಿಪ್ರಾಯಪಡುತ್ತಾರೆ.

ವಿದ್ಯಾರ್ಥಿಗಳಲ್ಲಿ ಸುಧಾರಿತ ಫಲಿತಾಂಶಗಳಿಗೆ ಕಾರಣವಾದ ಹೆಚ್ಚಿನ ಬೆಂಬಲವನ್ನು ಒದಗಿಸುವ ಒಂದು ಮಾರ್ಗವೆಂದರೆ ನಿಮ್ಮ ಶಿಕ್ಷಕರಿಗೆ ತರಬೇತಿ ನೀಡುವುದು.  ' ನಿಮ್ಮ ಶಿಕ್ಷಕರನ್ನು ಬೆಳೆಸುವುದು: ತರಬೇತಿ ಮತ್ತು ಮಾರ್ಗದರ್ಶನ' ಎಂಬ ಘಟಕದಲ್ಲಿ ನೀವು ತರಬೇತಿಯ ಬಗ್ಗೆ ಇನ್ನೂ ಹೆಚ್ಚು ತಿಳಿದುಕೊಳ್ಳಬಹುದು. ಹೊಸ ಜ್ಞಾನ ಅಥವಾ ಕೌಶಲಗಳನ್ನು  ಹೇಗೆ ಬೆಳೆಸಿಕೊಳ್ಳಬೇಕೆಂದು ಯೋಜಿಸಲು ನಿಮ್ಮ ಒಬ್ಬ ಶಿಕ್ಷಕರೊಡನೆ ಕೆಲಸ ಮಾಡಬಹುದು. ಚಟುವಟಿಕೆ ೭, ಪರಿವೀಕ್ಷಣೆಗೊಳ್ಳುವ ಕಾರ್ಯಯೋಜನೆಯ ಬಗ್ಗೆ ಆಲೋಚಿಸಲು ಹೇಳುತ್ತದೆ.

## ಚಟುವಟಿಕೆ ೭: ಕಾರ್ಯಯೋಜನೆಯೊಂದನ್ನು ರಚಿಸುವುದು

ಮೇಲೆ ನಮೂದಿಸಿರುವ ಮುರಳಿಧರನ್ ಮತ್ತು ಸುಂದರರಾಮನ್ (೨೦೧೦) ಅವರ ಸಂಶೋಧನೆಯ ಬಗ್ಗೆ ಆಲೋಚಿಸಿ, ನೀವು ಕೇಸ್ ಸ್ಟಡಿ ೪ರಲ್ಲಿರುವ ಖಾನ್ ಎಂದು ಭಾವಿಸಿಕೊಳ್ಳಿ. ತಮ್ಮ ತರಗತಿಗಳಲ್ಲಿ ಅವರ ಕೆಲಸದಲ್ಲಿ ಮೆಹ್ತಾ ಅವರು ತೋರಿಸುತ್ತಿರುವ ಕಡಿಮೆ ಕಾರ್ಯಕ್ಷಮತೆಯನ್ನು ಸುಧಾರಿಸಿಕೊಳ್ಳಲು, ಅವರೊಡನೆ ನೀವು ಹೇಗೆ ಕೆಲಸ ಮಾಡುತ್ತೀರಿ ಎಂದು ಒಂದು ಕಾರ್ಯಯೋಜನೆಯನ್ನು ಸಿದ್ದಪಡಿಸಿಕೊಳ್ಳಿ.. ಈ ಕಾರ್ಯ ಯೋಜನೆ ಆ ಶಿಕ್ಷಕರ ಬೆಳವಣಿಗೆಯಲ್ಲಿ ಹೇಗೆ ಸಹಾಯವಾಗಬಹುದು ಮತ್ತು ನೀವು ಮತ್ತು ಸ್ವತಃ ಮೆಹ್ತಾ ಅವರೇ ಈ ಕಾರ್ಯಯೋಜನೆಯನ್ನು ಹೇಗೆ ಪರಿವೀಕ್ಷಿಸಬಹುದೆಂಬುದರ ಬಗ್ಗೆ ಯೋಚಿಸಿ.  ನೀವು ಅಭ್ಯಾಸ ಮಾಡಿ ನಿಮ್ಮ ಶಾಲೆಯ ವಾತಾವರಣದಲ್ಲಿ

ನಿಮ್ಮ ಶಿಕ್ಷಕರಿಗೆ ನೀವು ವರ್ಗಾಯಿಸಬಹುದಾದಂತಹ ಕೌಶಲಗಳನ್ನು ಈ ಕೇಸ್ ಸ್ಟಡಿ ಚಟುವಟಿಕೆಗಳು ಒದಗಿಸುತ್ತವೆ.

**ಚರ್ಚೆ**

- ಇದು ಸೃಜನಾತ್ಮಕವಾಗಿ ಇರಲು ಒಂದು ಅವಕಾಶವಾಗಬಹುದು. ಯಾವುದಾದರೂ ದೈಹಿಕ ಕಾರಣದಿಂದ ಮೆಹ್ತಾ ಅವರು ಪಾಠಗಳ ನಡುವೆ ಸ್ಟಾಫ್ ರೂಂಗೆ ಹೋಗುತ್ತಿದ್ದರೆ, ಪಾಠದ ಪ್ರಾರಂಭದಲ್ಲಿ ವಿದ್ಯಾರ್ಥಿಗಳಿಗೆ ವರ್ಕ್ ಶೀಟ್ ಗಳು ಅಥವಾ ವರ್ಕ್ ಬುಕ್ ಗಳನ್ನು ನೀಡುವ ಮಾನಿಟರ್ ಇದ್ದರೆ ಹೇಗೆ? ಮೆಹ್ತಾ ಅವರು ಪುನಃ ತರಗತಿಗೆ ಹಿಂದಿರುಗುವ ಮುನ್ನ ವಿದ್ಯಾರ್ಥಿಗಳು ಈ ಕೆಲಸವನ್ನು ಪ್ರಾರಂಭಿಸಬಹುದು.
- ಮತ್ತೊಬ್ಬ ಶಿಕ್ಷಕರು ಪಾಠಕ್ಕೆ ಉತ್ತಮ ಆರಂಭ ನೀಡಲು ಅನುವಾಗುವಂತೆ, ಒಂದು ರೀತಿಯ ತಂಡ ಬೋಧನೆಯನ್ನು ವ್ಯವಸ್ಥೆ ಮಾಡಲು ಸಾಧ್ಯವೇ? ಈ ತರಹದ ತರಬೇತಿ ಹಾಗು ಮಾರ್ಗದರ್ಶನ ಮೆಹ್ತಾ ಅವರಿಗೆ ಲಾಭದಾಯಕವಾಗುತ್ತದೆಯೇ?
- ಕಾರ್ಯ ಯೋಜನೆ ಮುಂದುವರೆದ ಅವಲೋಕನ, ಸ್ಪಷ್ಟವಾದ ಗುರಿಗಳು ಮತ್ತು ಪ್ರಗತಿಯನ್ನು ಚರ್ಚಿಸಲು ಯಾರಾದರೊಬ್ಬರ ಜೊತೆಗೆ ನಿಯಮಿತವಾದ ಭೇಟಿಯನ್ನು ಒಳಗೊಂಡಿರಬೇಕು.

ಮುಂದಿನ ಚಟುವಟಿಕೆಯಲ್ಲಿ ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿರುವ ಶಿಕ್ಷಕರಿಗೆ ನೀವು ಫೀಡ್ ಬ್ಯಾಕ್ ನೀಡುತ್ತೀರಾ. ಈ ಫೀಡ್ ಬ್ಯಾಕ್ ನೀವು ಈ ಹಿಂದೆ ಸಾಕ್ಷ್ಯಾಧಾರಗಳನ್ನು ಸಂಗ್ರಹಿಸಿದ ಶಿಕ್ಷರ ಬಗ್ಗೆ ಇರಬಹುದು ಅಥವಾ ನೀವು ನಡೆಸಿದ ಹೊಸ ಅವಲೋಕನವಿರಬಹುದು. ಈ ಚಟುವಟಿಕೆಯಲ್ಲಿ ಶಿಕ್ಷಕರರಿಗಿರುವ ಒಳ್ಳೆಯ ಹೆಸರಿನಿಂದಾಗಿ ಅವರ ಬಗ್ಗೆ ನೀವು ಊಹಿಸಿಕೊಂಡಿರುವ ಅಂಶಗಳನ್ನು ಆಧರಿಸದೆ ಸಾಕ್ಷ್ಯಾಧಾರಗಳನ್ನುಆಧರಿಸಬೇಕೆಂಬುದನ್ನು ನೆನಪಿನಲ್ಲಿಟ್ಟುಕೊಳ್ಳಿ.

## ಚಟುವಟಿಕೆ ೮: ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿರುವ ಶಿಕ್ಷಕರಿಗೆ ಫೀಡ್ ಬ್ಯಾಕ್

ಅತ್ಯುತ್ತಮವಾಗಿ ಪಾಠ ಮಾಡಿದ್ದನ್ನು ನೀವು ಗಮನಿಸಿದ ಶಿಕ್ಷಕರನ್ನು ಇಲ್ಲಿ ಗಣನೆಗೆ ತೆಗೆದುಕೊಳ್ಳಿ. ಈ ಶಿಕ್ಷಕರು ಮಾಡಿದ ಪಾಠದ ಒಂದು ನಿರ್ದಿಷ್ಟ ಭಾಗ ಅಥವಾ ಈ ಶಿಕ್ಷಕರ ಕಾರ್ಯನಿರ್ವಹಣೆಯಲ್ಲಿ ನಿಮಗೆ ಮೆಚ್ಚಿಗೆಯಾದ ಒಂದು ಅಂಶವನ್ನು ಆಯ್ಕೆಮಾಡಿ. ನೀವು ನೀಡಬೇಕಾದ ಫೀಡ್ ಬ್ಯಾಕ್ ಬಗ್ಗೆ ಎಚ್ಚರಿಕೆಯಿಂದ ಯೋಚಿಸಿ ಹಾಗು ಆ ಫೀಡ್ ಬ್ಯಾಕ್ ಅನ್ನು ಬೆಂಬಲಿಸಲು ನಿಮ್ಮ ಬಳಿ ಸಾಕಷ್ಟು ಸಾಕ್ಷ್ಯಾಧಾರಗಳು ಇರುವುದನ್ನು ಖಾತ್ರಿ ಪಡಿಸಿಕೊಳ್ಳಿ.

ನೀವು ನೀಡುವ ಫೀಡ್ ಬ್ಯಾಕ್ ಅಲ್ಲಿ ನೀವು ಮಾಡಬೇಕಾದದು:

- ಆ ನಿರ್ದಿಷ್ಟ ಅಂಶ ಅಥವಾ ಚಟುವಟಿಕೆಯನ್ನು ಅವರಿಗೆ ವಿವರಿಸಿ
- ಆ ಚಟುವಟಿಕೆ ಶ್ರೇಷ್ಠ ಗುಣಮಟ್ಟದಾಗಿತ್ತೆಂದು ನೀವು ನಿರ್ಧಸಿದ್ದು ಏಕೆಂದು ವಿವರಿಸಿ
- ಪುರಾವೆಗಳೊಂದಿಗೆ ನಿಮ್ಮ ಪ್ರಶಂಸೆಯನ್ನು ನೀಡಿ
- ನಿಮ್ಮ ಚರ್ಚೆಯನ್ನುಯಾವ ಸಂಬಂಧಿತ ಮಾನದಂಡದ ಆಧಾರದ ಮೇಲೆ ಮಾಡುತ್ತೀರಿ ಎಂಬುದನ್ನು ಆಯ್ಕೆ ಮಾಡಿಕೊಂಡು ಬಳಸಿಕೊಳ್ಳಬೇಕು.

ನೀವು ಏನು ಹೇಳಬೇಕೆಂದು ಯೋಜಿಸಿಕೊಳ್ಳಿ ಮತ್ತು ಭೇಟಿಗಾಗಿ ಒಳ್ಳೆಯ ವಾತಾವರಣವನ್ನು ಸಹ ಯೋಜಿಸಿ. ಭೇಟಿಯ ಸಮಯದಲ್ಲಿ ಅವರೊಡನೆ ಮಾತನಾಡುವಾಗ, ತಾವು ಅನುಸರಿಸುವ ಕ್ರಮಗಳನ್ನು ಆ ಶಿಕ್ಷಕರು ಇತರರಿಗೂ ಹೇಗೆ ವಿಸ್ತರಿಸಬಹುದೆಂದು ಅಥವಾ ಅವರ ಬೋಧನೆಯ ಇತರ ವಲಯಗಳಿಗೂ ಹೇಗೆ ವಿಸ್ತರಿಸಿಕೊಳ್ಳಬಹುದೆಂದು ಆಲೋಚಿಸಲು ನೀವು ಶಿಕ್ಷಕರನ್ನು ಕೇಳಬಹುದು .

ಈ ಭೇಟಿಯ ನಂತರ ನೀವು ನೀಡಿದ ಫೀಡ್ ಬ್ಯಾಕ್ ಅನ್ನು ಆ ಶಿಕ್ಷಕರು ಹೇಗೆ ಸ್ವೀಕರಿಸದರೆಂದು ನಿಮ್ಮಕಲಿಕೆ ಡೈರಿಯಲ್ಲಿ ಟಿಪ್ಪಣಿ ಬರೆದುಕೊಳ್ಳಿ. ನೀವು ಈ ಅಭಿಪ್ರಾಯಕ್ಕೆ ಬರಲು ಅವರ ಯಾವ ನಡವಳಿಕೆಯನ್ನು ನೀವು ಗಮನಿಸಿದಿರಿ? ಭೇಟಿಯ ಮುನ್ನ ಮತ್ತು ನಂತರ ನಿಮ್ಮ ಭಾವನೆ ಹೇಗಿತ್ತೆಂದು ಸಹ ಬರೆದುಕೊಳ್ಳಿ. ನೀವು ನಂಬುವ ಸಹದ್ಯೋಗಿಗಳಿದ್ದರೆ, ಅವರೊಡನೆ ಇದರ ಬಗ್ಗೆ ಚರ್ಚಿಸಿ.

ಚರ್ಚೆ

ನಿಮ್ಮ ಭೇಟಿ ಚೆನ್ನಾಗಿತ್ತೆಂದು ಹಾಗು ನೀವು ನೀಡಿದ ಪ್ರಶಂಸೆಯನ್ನು ಉತ್ತಮವಾಗಿ ಸ್ವೀಕರಿಸಲಾಗಿದೆ ಎಂದು ಆಶಿಸುತ್ತೇವೆ. ಇದು ನೀವು ನಿಮ್ಮ ಶಾಲೆಯಲ್ಲಿ ಆಯೋಜಿಸಿದ್ದ ಮೊದಲ ಭೇಟಿಯಾಗಿದ್ದರೆ, ನೀವು ಮತ್ತು ಶಿಕ್ಷಕರಿಬ್ಬರೂ ತಳಮಳಗೊಂಡಿರುವ ಸಾಧ್ಯತೆ ಇರುತ್ತದೆ. ಸಕರಾತ್ಮಕವಾಗಿದ್ದರೂ ಸಹ, ಕಾರ್ಯಕ್ಷಮತೆಯ ಬಗೆಗಿನ ಮಾತುಕತೆ ಕಷ್ಟಕರವಾಗಿರುತ್ತದೆ. ಮಾತುಕತೆಯನ್ನು ವಸ್ತುನಿಷ್ಟವಾಗಿಯೂ ವೃತ್ತಿಪರ ಮಟ್ಟದಲ್ಲಿಯೂ ಇಟ್ಟಿಕೊಳ್ಳಲು ನೀವು ಬಳಸುವ ಮಾನದಂಡಗಳು ಬಹಳ ಮುಖ್ಯವಾಗುತ್ತವೆ. ನೀವು ನೀಡುವ ಫೀಡ್ ಬ್ಯಾಕ್ ಅವರ ಕಾರ್ಯಕ್ಷಮತೆಯ ಬಗ್ಗೆ ಇರಬೇಕೇ ಹೊರತು ಒಬ್ಬ ವ್ಯಕ್ತಿಯಾಗಿ ಅಲ್ಲಾ.

# ೫. ಮುಂದುವರೆಸಿಕೊಂಡು ಹೋಗುವ ಪದ್ಧತಿಯಾಗಿ ಸಾಕ್ಷ್ಯಾಧಾರಗಳ ಸಂಗ್ರಹಣೆ, ಫೀಡ್ ಬ್ಯಾಕ್ ಮತ್ತು ಶಿಕ್ಷಕರ ಬೆಳವಣಿಗೆ

ನೀವು ಈ ಘಟಗದಲ್ಲಿ ಈಗ ಸಾಕಷ್ಟು ಕೆಲಸ ಮಾಡಿದ್ದೀರ. ಸಾಕ್ಷ್ಯಾಧಾರಗಳ ಸಂಗ್ರಹಣೆ, ಫೀಡ್ ಬ್ಯಾಕ್ ಹಾಗು ಕಡಿಮೆ ಕಾರ್ಯಕ್ಷಮತೆ ಕಂಡು ಬಂದಾಗ, ಒಬ್ಬ ಶಿಕ್ಷಕರಿಗೆ ಹೆಚ್ಚುವರಿ ನೆರವು ನೀಡುವುದು ಎಷ್ಟು ಸಮಯ ಹಿಡಿಸುತ್ತದೆ ಮತ್ತು ಭಾವನಾತ್ಮಕವಾಗಿ ಎಷ್ಟು ತ್ರಾಸದಾಯಕವಾದ ಕೆಲಸವೆಂದು ಅರಿತ್ತಿದ್ದೀರಿ.

ಸಾಕ್ಷ್ಯಾಧಾರಗಳ ಸಂಗ್ರಹಣೆ, ಫೀಡ್ ಬ್ಯಾಕ್ ಹಾಗು ಶಿಕ್ಷಕರ ಬೆಳವಣಿಗೆ, ಮುಂದುವರೆದುಕೊಂಡು ಹೋಗುವ ಕ್ರಮದ ಒಂದು ಭಾಗವಾಗಿದ್ದರೆ ಅತ್ಯುತ್ತಮವಾಗಿರುತ್ತದೆ. ಹೀಗಾದಾಗ, ಕಡಿಮೆ ಕಾರ್ಯಕ್ಷಮತೆ ಗೋಚರಿಸದೇ ಹೋಗುವ ಸಾಧ್ಯತೆ ಕಡಿಮೆ ಇರುತ್ತದೆ ಮತ್ತು ಒಟ್ಟು ಕಾರ್ಯಕ್ಷಮತೆಯನ್ನು ಹೆಚ್ಚಿಸಬಲ್ಲದು. ಶಾಲೆಯ ನಾಯಕರೇ ಎಲ್ಲಾ ಸಾಕ್ಷ್ಯಾಧಾರಗಳ ಸಂಗ್ರಹಣೆ ಮತ್ತು ಫೀಡ್ ಬ್ಯಾಕ್ ಮಾಡಬೇಕಾಗಿಲ್ಲಾ. ತಮ್ಮ ಬೆಳವಣಿಗೆಯ ಒಂದು ಭಾಗವಾಗಿ ಶಿಕ್ಷಕರು ಇದನ್ನು ಹಂಚಿಕೊಳ್ಳಬಹುದು.



http://tinyurl.com/video-sl-teachers

ವಿಡಿಯೋ: ಶಾಲಾ ನಾಯಕತ್ವ- ಶಿಕ್ಷಕರನ್ನು ಮುನ್ನಡೆಸುವುದು

## ಚಟುವಟಿಕೆ ೯: ಬೋಧನೆಯ ಬಗ್ಗೆ ನಿಯಮಿತ ಪರಿಶೀಲನೆ

ನಿಮ್ಮ ಶಾಲೆಯಲ್ಲೇ ಬೋಧನೆಯ ಒಂದು ಅಂಶದ ಬಗ್ಗೆ ನಿಯಮಿತವಾಗಿ ಪರಿಶೀಲಿಸಲು ಒಂದು ಯೋಜನೆಯನ್ನು ರೂಪಿಸಿ. ಈ ಅಂಶ, ಪಾಠಗಳ ಪ್ರಾರಂಭ, ಹೋಂ ವರ್ಕ್ ರಚಿಸುವುದು ಅಥವಾ ವಿದ್ಯಾರ್ಥಿ-ಶಿಕ್ಷಕರ ಸಂಬಂಧ, ಯಾವುದಾದರೂ ಆಗಿರಬಹುದು.

ನೀವು ಗಮನ ಕೇಂದ್ರೀಕರಿಸಲು ಅನೇಕ ವಿಷಯಗಳನ್ನು ಆಯ್ಕೆ ಮಾಡಿಕೊಳ್ಳಬಹುದು.-ನೀವು ಪರಿಶೀಲಿಸ ಬೇಕೆಂದಿರುವ ಬೋಧನೆಯ ಅಂಶಗಳನ್ನು ಗುರುತಿಸಲು ನೀವು ಟೆಸ್- ಇಂಡಿಯಾ ಅಭಿವೃದ್ಧಿಪಡಿಸಿರುವ ಮುಖ್ಯ ಸಂಪನ್ಮೂಲಗಳನ್ನು ಬಳಸಿಕೊಳ್ಳಬಹುದು. ಶಿಕ್ಷಕರಿಗೆ ಕೈಪಿಡಿಯಂತೆ ನೀಡಲು ಸಂಪನ್ಮೂಲ ೧, ' ಪಾಠಗಳನ್ನು ಯೋಜಿಸುವುದು' ಅನ್ನು ಬಳಸಬಹುದು. ಅಥವಾ ಈ ಸಂಪನ್ಮೂಲ ನೀವು ಏನನ್ನು ಹುಡುಕಬೇಕೆಂದು ನಿರ್ಧರಿಸಲು ನೆರವಾಗುತ್ತದೆ.

ಬೋಧನೆಯ ಆ ನಿರ್ಧಿಷ್ಟ ಅಂಶವನ್ನು ನೀವು ಏಕೆ ಆಯ್ಕೆ ಮಾಡಿದಿರೆಂಬುದನ್ನು ನಿಮ್ಮ ಕಲಿಕೆ ಡೈರಿಯಲ್ಲಿ ಬರೆದಿಡಿ ಹಾಗು ಭವಿಷ್ಯದಲ್ಲಿ ನೀವು ಇನ್ನ್ಯಾವ ಅಂಶಗಳನ್ನು ಗಮನಿಸಲು ಬಯಸುತ್ತೀರಿ ಮತ್ತು ಏಕೆಂಬುದನ್ನು ಸಹ ಬರೆದಿಡಿ.

ಈಗ ಇಲ್ಲಿ ನೀಡಿರುವ ಕೇಸ್ ಸ್ಟಡಿಯನ್ನು ಓದಿ:

## ಕೇಸ್ ಸ್ಟಡಿ ೫: ತಮ್ಮ ಶಿಕ್ಷಕರ ಪ್ರಗತಿಯ ಜಾಡನ್ನು ಎಸ್ ಜೆ ಅನುಸರಿಸುತ್ತಾರೆ

ಎಸ್ ಜೆ ಎಂದೇ ಜನಪ್ರಿಯವಾಗಿರುವ ಸುನಿತಾ ಜವಹರ್ ಅವರು, ತಮ್ಮ ಶಾಲಾ ನಾಯಕರ ಡೈರಿಯನ್ನು ಅತ್ಯಂತ ನಿಖರವಾಗಿ ಇಟ್ಟುಕೊಂಡಿದ್ದಾರೆ. ತಮಗೆ ತಾವೇ ಇಟ್ಟುಕೊಂಡಿದ್ದ ಮಾಸಿಕ ಗುರಿಯ ಬಗ್ಗೆ ಯೋಚಿಸಲು, ಇಡೀ ವರ್ಷವನ್ನು ಒಮ್ಮೆ ಅವಲೋಕಿಸಲು ಡೈರಿ ಅತ್ಯಮೂಲ್ಯ ವಾಗಿತ್ತು.

ಈ ತಿಂಗಳು ಅವರು ತರಗತಿ ಕೊನೆಗೊಳ್ಳುವ ಅವಧಿಯನ್ನು ಗಮನಿಸಲು ನಿರ್ಧರಿಸಿದ್ದರು. ಕೆಳಗಿನ ಅಂಶಗಳನ್ನು ಖಾತ್ರಿಪಡಿಸಿಕೊಳ್ಳುವುದು ಅವರ ಗುರಿಯಾಗಿತ್ತು:

- ಪಾಠದ ವಸ್ತುವಿಷಯ ಮತ್ತು ಪರಿಣಾಮಗಳ ಸಾರಾಂಶ ನೀಡುವದರ ಮೂಲಕ ಶಿಕ್ಷಕರು ಪಾಠವನ್ನು ಪೂರ್ಣಗೊಳಿಸುವುದು.
- ಪಾಠದ ಕೊನೆಯಲ್ಲಿ ನೀಡುವ ಹೋಂ ವರ್ಕ್ ಎಲ್ಲಾ ವಿದ್ಯಾರ್ಥಿಗಳಿಗೂ ಲಭ್ಯವಾಗುವಂತಿರಬೆಕು ಹಾಗು ಎಲ್ಲರೂ ಅದನ್ನು ಸಾಧಿಸುವಂತಿರಬೇಕು.
- ತರಗತಿಗಳು ಸರಿಯಾದ ಸಮಯಕ್ಕೆ ಅಂತ್ಯಗೊಳ್ಳಬೇಕು.

ಈ ಗುರಿಗಳನ್ನು ಆಂತರಿಕ ಮೆಮೋ ಮೂಲಕ ಎಲ್ಲಾ ಶಿಕ್ಷಕರಿಗೂ ಕಳುಹಿಸಲಾಗಿತ್ತು ಮತ್ತು ವಿದ್ಯಾರ್ಥಿಗಳ ಕಲಿಕೆಯನ್ನು ಸುಧಾರಿಸಲು ಈ ಕ್ರಮ ಕೈಗೊಳ್ಳಲಾಗುತ್ತಿದೆ ಎಂಬುದನ್ನು ಸ್ಪಷ್ಟಪಡಿಸಲಾಗಿತ್ತು. ಎಲ್ಲಾ ಶಿಕ್ಷಕರ ಸಹಿಗಳನ್ನು ಪಡೆದ ಬಳಿಕ, ಮೆಮೋವಿನ ಫೋಟೋ ಕಾಪಿಯನ್ನು ಪಡೆದು ಆ ಪ್ರತಿಯನ್ನು ಸ್ಟಾಫ್ ರೂಂನ ನೋಟಿಸ್ ಬೋರ್ಡ್ ಮೇಲೆ ಹಾಕಲಾಯಿತು.

ಆ ವಾರದ ಅವಧಿಯಲ್ಲಿ ತುಂಬಿಸಲು, ೫ ಕಾಲಂ ಮತ್ತು ೭ ರೋಗಳಿದ್ದ ಒಂದು ಟ್ರಾಕರ್ ಅನ್ನು ಎಸ್ ಜೆ ರಚಿಸಿದ್ದರು. ಮೊದಲನೆಯ ಕಾಲಂ ಹೆಸರು ' ವಿಷಯ' ಎಂದು ಬರೆಯಲಾಗಿತ್ತು ಹಾಗು ಅದರಡಿಯಲ್ಲಿ 'ವಿಜ್ಞಾನ'. 'ಸಮಾಜ ಶಾಸ್ತ್ರ', ಗಣಿತ ಹಾಗು ನಂತರ ಶಾಲೆಯಲ್ಲಿ ಬೋಧಿಸಲ್ಪಡುವ ಪ್ರತಿ ಭಾಷೆಯ ಹೆಸರು ಇತ್ತು. ಇತರ ಕಾಲಂ ಗಳ ಹೆಸರು ೯ನೇ ಎ. ೯ನೇಬಿ. ೧೦ನೇ ಎ ೧೦ನೇ ಬಿ ಎಂದಿತ್ತು.

ಕೋಷ್ಠಕವು ತುಂಬಲಾರಂಭಿಸಿತು. ಪಾಠ ಮುಗಿಯಲು ಇನ್ನು ಹತ್ತು ನಿಮಿಷವಿರುವಾಗ ಅವರು ೯ನೇ ಬಿ ತರಗತಿಯೊಳಗೆ ನಡೆದು, ಕೇವಲ ಅವರ ಆ ತಿಂಗಳ ಗುರಿಗೆ ಅನುಗುಣವಾಗಿ, ತಮ್ಮ ಅವಲೋಕನ ಫಾರಂ ಅನ್ನು ಭರ್ತಿ ಮಾಡಿಕೊಂಡರು. ೧೦ನೇ ಎಯಲ್ಲಿ ಇಂಗ್ಲೀಷ್, ೯ನೇ ಬಿಯಲ್ಲಿ ಹಿಂದಿ ಮತ್ತು ೯ನೇ ಬಿಯಲ್ಲಿ ಸಮಾಜ ಶಾಸ್ತ್ರ ವಿಷಯಗಳಲ್ಲಿ ಅವರು ಹೀಗೆಯೆ ಮಾಡಿದ್ದರು. ಈ ವಾರ ಉಳಿದ ೨೦ ತರಗತಿಗಳನ್ನು ಗಮನಿಸುವ ಪ್ರಕ್ರಿಯೆಯನ್ನು ಈ ವಾರ ಮುಗಿಸಲು ಅವರು ನಿರ್ಧರಿಸಿದ್ದರು. ನಂತರ ಈ ಅಂಕಿ ಅಂಶಗಳನ್ನು , ಶಿಕ್ಷಕರ ಸಭೆಗೆ ಮುನ್ನ ಸ್ಟಾಫ್ ರೂಂನಲ್ಲಿ ಹಾಕಲು ಯೋಚಿಸಿದರು. ಯಾವುದೇ ಹೆಸರುಗಳನ್ನು ಸೂಚಿಸದೆ, ಪೈ ಚಾರ್ಟ್ ರೂಪದಲ್ಲಿ ಅಂಕಿ ಅಂಶಗಳನ್ನು ತೋರಿಸಲು ಯೋಜಿಸಿದ್ದರು. ಆದರೆ, ಗುರಿಯನ್ನು ಮುಟ್ಟದ ಶಿಕ್ಷಕರನ್ನು ಭೇಟಿ ಮಾಡಿದಾಗ, ಗುರಿ ಮುಟ್ಟಲು ಅವರಿಗೆ ತಾವು ಯಾವ ರೀತಿಯ ಬೆಂಬಲ ನೀಡಬಹುದೆಂದು ಅವರನ್ನೇ ಕೇಳುವ ಯೋಜನೆ ಅವರಲ್ಲಿತ್ತು.

ಎಸ್ ಜೆ ಅವರೊಡನೆ ಲೆಸನ್ ಪ್ಲಾನ್ ಅನ್ನು ಚರ್ಚಿಸಲು ಈಗಾಗಲೇ ಒಬ್ಬರು ಅವರನ್ನು ಭೇಟಿ ಮಾಡಲು ಬಂದಿದ್ದರು- ಹಾಗು ಅವರಿಬ್ಬರೂ ಪಾಠವನ್ನು ಇನ್ನೂ ಉತ್ತಮ ರೀತಿಯಲ್ಲಿ ಹೇಗೆ ಮಾಡಬಹುದೆಂಬುದರ ಬಗ್ಗೆ ಕೆಲಸ ಮಾಡಿದ್ದರು. ಶ್ರೀಮತಿ ನಾಗರಾಜು ೯ನೇ ಬಿ ತರಗತಿಯ ಹಿಂದಿ ಪಾಠವನ್ನು ಅತ್ಯಂತ ಉತ್ತಮವಾಗಿ ಯೋಜಿಸಿದ್ದರು ಹಾಗು ಅವರು ನೀಡಿದ ಪಾಠದ ಸಾರಾಂಶ ಸ್ಪಷ್ಟವಾಗಿದ್ದು, ವಿದ್ಯಾರ್ಥಿಗಳು ಅವರ ಕಲಿಕೆಯನ್ನು ಗುರುತಿಸಿಕೊಂಡಿದ್ದರು. ಈ ಫೀಡ್ ಬ್ಯಾಕ್ ನಿಂದ ಶ್ರೀಮತಿ ನಾಗರಾಜುವಿಗೆ ಬಹಳ ಸಂತಸವಾಗಿದ್ದರೂ ಸಹ, ತಮ್ಮ ಇತರ ಸಹದ್ಯೋಗಿಗಳಿಗೆ ಮಾದರಿಯಾಗಿರಲು ಒಪ್ಪಿಕೊಳ್ಳಲು ಅವರಿಗೆ ಇನ್ನೂ ಸ್ವಲ್ಪ ಹೆಚ್ಚು ಪ್ರೋತ್ಸಾಹ ಬೇಕಾಗಿತ್ತು. ತಮ್ಮ ಯೋಜನೆ ಕೆಲಸ ಮಾಡುತ್ತಿತ್ತು ಎಂದು ಅರಿತ ಎಸ್ ಜೆ, ಆ ದಿನದ ಪುಟದ ಕೊನೆಯಲ್ಲಿ ತಮಗೆ ಒಂದು ಸ್ಟಾರ್ ನೀಡಿಕೊಂಡರು. ತಿಂಗಳ ಕೊನೆಯ ವೇಳೆಗೆ ತಮ್ಮ ಎಲ್ಲಾ ಮೂರು ಗುರಿಗಳನ್ನು ಮುಟ್ಟುವ ಬಗ್ಗೆ ಅವರಿಗೆ ವಿಶ್ವಾಸವಿತ್ತು

Iಆದರೆ ಆಗ ಅವರ ಅರಿವೆಗೆ ಬಂದ ವಿಷಯವೆಂದರೆ, ಈ ಸಾಧನೆಯನ್ನು ತಮ್ಮ ಸಿಬ್ಬಂಧಿಯೊಂದಿಗೆ ಹೇಗೆ ಸಂಭ್ರಮಿಸಬೇಕೆಂದು ಅವರು ಯೋಚಿಸಿರಲಿಲ್ಲಾ! ಅವರ ಯೋಜನೆ ಸಂಪೂರ್ಣವಾಗಿರಲಿಲ್ಲ. ಆ ದಿನದ ಅಂತಿಮ ಟಿಪ್ಪಣಿಯನ್ನು ಡೈರಿಯಲ್ಲಿ ಬರೆದುಕೊಂಡರು: '' ನನ್ನ ಹೋಂ

ವರ್ಕ್: ಪಾಠದ ಸಾರಾಂಶದ ಉಪಯುಕ್ತತೆಯ ಬಗ್ಗೆ ವಿದ್ಯಾರ್ಥಿಗಳಿಂದ ಫೀಡ್ ಬ್ಯಾಕ್ ಅನ್ನು ಹೇಗೆ ಪಡೆಯುವುದು ಹಾಗು ಈ ಫೀಡ್ ಬ್ಯಾಕ್ ಅನ್ನು ಸಮೀಕರಿಸಿ ಶಿಕ್ಷಕರಿಗೆ ಹೇಗೆ ವರದಿ ಮಾಡುವುದೆಂದು ಯೋಚಿಸುವುದು'

### ಚಟುವಟಿಕೆ ೧೦: ನಿಮ್ಮ ಯೋಜನೆಯ ಪರಿಶೀಲನೆ

ಕೇಸ್ ಸ್ಟಡಿ ೫ ಅನ್ನು ಓದಿದ ಮೇಲೆ, ನಿಮ್ಮ ಪ್ಲಾನ್ ಅನ್ನು ಮತ್ತೊಮ್ಮೆ ನೋಡಿ ಅದನ್ನು ಹೇಗೆ ಬದಲಾಯಿಸಬಹುದೆಂಬುದನ್ನು ಯೋಚಿಸಿ. ನಿಮ್ಮ ಇಬ್ಬರು ಶಿಕ್ಷಕರೊಡನೆ ನಿಮ್ಮ ಆಲೋಚನೆಯನ್ನು ಚರ್ಚಿಸಿ ಹಾಗು ಅದನ್ನು ಅಳವಡಿಸುವ ಮುನ ಇನ್ನೂ ಏನಾದರೂ ಬದಲಾವಣೆ ಮಾಡುವ ಅಗತ್ಯವಿದೆಯೆ ಎಂದು ಒಮ್ಮೆ ನೋಡಿ.

ಸೂಚಿಸಿದ ಚಟುವಟಿಕೆಯ ಬಗ್ಗೆ ಶಿಕ್ಷಕರ ಪ್ರತಿಕ್ರಿಯನ್ನು ನಿಮ್ಮ ಕಲಿಕೆ ಡೈರಿಯಲ್ಲಿ ಟಿಪ್ಪಣಿ ಬರೆದುಕೊಳ್ಳಿ ಮತ್ತು ಇದರಿಂದಾಗಿ ನಿಮ್ಮ ಇಡೀ ಸಿಬ್ಬಂದಿಗೆ ಇದನ್ನು ಹೇಗೆ ಪರಿಚಯಿಸುತ್ತೀರಿ ಎಂಬುದರ ಬಗ್ಗೆ ಯೋಚಿಸಿ.

# ೬. ಸಾರಾಂಶ

ಶ್ರೇಷ್ಠ ಗುಣಮಟ್ಟದ ಬೋಧನೆಯನ್ನು ನಿರೀಕ್ಷಿಸುವ ಹಕ್ಕು ವಿದ್ಯಾರ್ಥಿಗಳಿಗೆಯಿದೆಯಾದರೂ, ಅವರಿಗೆ ಅದು ಎಲ್ಲಾ ಸಮಯದಲ್ಲೂ ದೊರಕುವುದಿಲ್ಲಾ. ಇದಕ್ಕೆ ಹಲವಾರು ಕಾರಣಗಳಿರಬಹುದು-ಅದರಲ್ಲಿ ಒಂದು ಶಿಕ್ಷಕರ ಕಾರ್ಯಕ್ಷಮತೆ ಮತ್ತು ಕಾರ್ಯನಿರ್ವಹಣೆ. ಈ ಅಂಶದ ಮೇಲೆ ಪರಿಣಾಮ ಬೀರುವ ಸಾಮರ್ಥ್ಯ ಶಾಲೆಯ ನಾಯಕರಲ್ಲಿದೆ.

ಆದರೆ ನಂಬಿಕೆ ವಿಶ್ವಾಸ ಉನ್ನತ ಮಟ್ಟದಲ್ಲಿರುವ ಸಂಸ್ಥೆಯಲ್ಲಿ ಮಾತ್ರ ಇದು ಸಾಧ್ಯ. ಅಲ್ಲಿರುವ ವ್ಯಕ್ತಿಗಳಿಗೆ, ತಮ್ಮನ್ನು ವೈಯಕ್ತಿಕವಾಗಲ್ಲದೆ, ತಮ್ಮ ಬೋಧನೆ ನಡವಳಿಕೆಯನ್ನು ವಿಶ್ಲೇಶಿಸಲಾಗುತ್ತಿದೆ ಎಂಬ ನಂಬಿಕೆ ಹುಟ್ಟಿ ಅವರಿಗೆ ಅದು ಮೌಲ್ಯಾಧಾರಿತವಾಗಿ ಕಂಡು ಬರಬೇಕು. ಹೀಗಾಗದಿದ್ದರೆ ಕಹಿ ಭಾವನೆಗಳು ಉಂಟಾಗಿ ವೈಷಮ್ಯಕ್ಕೆ ಕಾರಣವಾಗಬಹುದು. ಈ ಕಾರಣದಿಂದಾಗಿಯೇ ಹೆಚ್ಚು ಕಷ್ಟಕರ ವಲಯಗಳನ್ನು ನಿಭಾಯಿಸುವ ಮೊದಲು ಸಕರಾತ್ಮಕ ಫೀಡ್ ಬ್ಯಾಕ್ ಅನ್ನು ನೀಡುವುದನ್ನು ಅಭ್ಯಾಸ ಮಾಡುವುದು ಮುಖ್ಯವಾಗುತ್ತದೆ.

ಸಂಗ್ರಹಿಸಿದ ವಸ್ತುನಿಷ್ಟ ಸಾಕ್ಷ್ಯಾಧಾರಗಳನ್ನುಆಧರಿಸಿ, ಶಿಕ್ಷಕರ ತರಗತಿಯಲ್ಲಿನ ನಡವಳಿಕೆಯನ್ನು ಎಷ್ಟು ನಿಯಮವಿತವಾಗಿ ಪರ್ಯಾಲೋಚಿಸಲಾಗುತ್ತದೋ, 'ಕಳಪೆ' ಎನ್ನುವ ಮಟ್ಟಕ್ಕೆ ಅವರ ಕಾರ್ಯಕ್ಷಮತೆ ಇಳಿಯುವ ಸಾಧ್ಯತೆ ಕಡಿಮೆ ಇರುತ್ತದೆ.- ಅದರಲ್ಲೂ ಬೆಂಬಲಿಸುವ ಅಭಿವೃದ್ಧಿ ಚಟುವಟಿಕೆಗಳು ಯೋಜಿಸಲಾಗಿರುವ ಸಂದರ್ಭಗಳಲ್ಲಿ.. ಅವಲೋಕನೆ ಮತ್ತು ಕಾರ್ಯಕ್ಷಮತೆಯ ಬಗ್ಗೆ ಚರ್ಚೆಗಳು ಒಂದು ಸಂಪ್ರದಾಯವಾಗುವ ಒಂದು ಸಂಸ್ಕೃತಿಯನ್ನು ಶಾಲೆಯಲ್ಲಿ ಸ್ಥಾಪಿಸಲು ಧೀರ್ಘಕಾಲ ಬೇಕಾಗಬಹುದು- ಬಹುಶ: ಒಂದು ವರ್ಷಕ್ಕಿಂತ ಹೆಚ್ಚು. ಆದ್ದರಿಂದ ಪ್ರಾರಂಭದಲ್ಲಿ ಸ್ವಲ್ಪ ಕಷ್ಟವಾಗಬಹುದು, ವಿರೋಧವೂ ಉಂಟಾಗಬಹುದು, ನಿಮ್ಮ ಪ್ರಯತ್ನವನ್ನು ಮುಂದುವರೆಸಿ ಕೊಂಡು ಹೋಗಿ- ಆದರೆ ಸೂಕ್ಷ್ಮತೆ ಮತ್ತು ನ್ಯಾಯಾಯುತವಾಗಿ.

ಬೋಧನೆ-ಕಲಿಕೆ ಪ್ರಕ್ರಿಯೆಯನ್ನು ಪರಿವರ್ತಿಸುವ ಮುಖ್ಯ ವಲಯಕ್ಕೆ ಸಂಬಂಧಿಸಿದ ಘಟಕಗಳ ಕುಟುಂಬಕ್ಕೆ ಅಥವಾ ಒಂದು ಸೆಟ್ಟಿನ ಒಂದು ಭಾಗ ಈ ಘಟಕ. ( ಇದು ನ್ಯಾಷನಲ್ ಕಾಲೇಜ್ ಆಫ್ ಸ್ಕೂಲ್ ಲೀಡರಶಿಪ್ ಗೆ) ಹೊಂದಿಕೊಂಡಿದೆ. ನಿಮ್ಮ ಜ್ಞಾನ ಮತ್ತು ಕೌಶಲಗಳನ್ನು ಬೆಳೆಸಿಕೊಳ್ಳಲು ಈ ಸೆಟ್ಟಿನಲ್ಲಿರುವ ಇತರ ಘಟಕಗಳತ್ತ ಗಮನ ಹರಿಸುವುದು ನಿಮಗೆ ಉಪಯೋಗವಾಗಬಹುದು.

- ಪ್ರಾಥಮಿಕ ಶಾಲೆಯಲ್ಲಿ ಬೋಧನೆ ಮತ್ತು ಕಲಿಕೆಯ ಸುಧಾರಣೆಯನ್ನು ಮುನ್ನಡೆಸುವುದು
- ಮಾಧ್ಯಮಿಕ ಶಾಲೆಗಳಲ್ಲಿ ಬೋಧನೆ ಮತ್ತು ಕಲಿಕೆಯನ್ನು ಸುಧಾರಣೆಯನ್ನು ಮುನ್ನಡೆಸುವುದು
- ನಿಮ್ಮ ಶಾಲೆಯಲ್ಲಿ ಮೌಲ್ಯೀಕರಣವನ್ನು ಮುಂದೆ ಮುನ್ನಡೆಸುವುದು
- ಶಿಕ್ಷಕರ ವೃತ್ತಿಪರ ಬೆಳವಣಿಗೆಯನ್ನು ಮುನ್ನಡೆಸುವುದು

- ಮಾರ್ಗದರ್ಶನ ಮತ್ತು ತರಬೇತಿ
- ನಿಮ್ಮ ಶಾಲೆಯಲ್ಲಿಪರಿಣಾಮಕಾರಿಯಾದ ಕಲಿಕೆ ಸಂಸ್ಕೃತಿಯನ್ನು ಬೆಳೆಸುವುದು
- ನಿಮ್ಮ ಶಾಲೆಯಲ್ಲಿ ಒಳಪಡಿಕೆಯನ್ನು ಪ್ರೋತ್ಸಾಹಿಸುವುದು
- ಪರಿಣಾಮಕಾರಿಯಾದ ವಿದ್ಯಾರ್ಥಿ ಕಲಿಕೆಗಾಗಿ ಸಂಪನ್ಮೂಲಗಳನ್ನು ನಿರ್ವಹಿಸುವುದು
- ನಿಮ್ಮ ಶಾಲೆಯಲ್ಲಿ ತಂತ್ರಜ್ಞಾನ ಬಳಕೆಯನ್ನು ಮುನ್ನಡೆಸುವುದು

# ಸಂಪನ್ಮೂಲಗಳು

## ಸಂಪನ್ಮೂಲ ೧: ಪರಿವೀಕ್ಷಣೆ ಮತ್ತು ಫೀಡ್ ಬ್ಯಾಕ್ ನೀಡಿಕೆ

ವಿದ್ಯಾರ್ಥಿಗಳ ಕಾರ್ಯಕ್ಷಮತೆಯನ್ನು ಸುಧಾರಿಸುವಿಕೆ, ಸತತ ಪರಿವೀಕ್ಷಣೆ ಹಾಗು ಅವುಗಳಿಗೆ ಪ್ರತಿಕ್ರಿಯಿಸುವುದನ್ನು ಒಳಗೊಂಡಿರುತ್ತದೆ. ಇದರಿಂದಾಗಿ ವಿದ್ಯಾರ್ಥಿಗಳಿಗೆ ತಮ್ಮಿಂದ ಏನು ನಿರೀಕ್ಷಿಸಲಾಗುತ್ತಿದೆ ಎಂದು ತಿಳಿಯುತ್ತದೆ ಮತ್ತು ತಮ್ಮ ಕೆಲಸವನ್ನು ಪೂರ್ಣಗೊಳಿಸಿದ ಮೇಲೆ ಅವರಿಗೆ ಫೀಡ್ ಬ್ಯಾಕ್ ಸಹ ಸಿಗುತ್ತದೆ. ನಿಮ್ಮ ರಚನಾತ್ಮಕ ಫೀಡ್ ಬ್ಯಾಕ್ ನಿಂದ ಅವರು ತಮ್ಮ ಕಾರ್ಯಕ್ಷಮತೆಯನ್ನು ಸುಧಾರಿಸಿಕೊಳ್ಳಬಹುದು.

## ಮೇಲ್ವಿಚಾರಣೆ

ಪರಿಣಾಮಕಾರಿಯಾದ ಶಿಕ್ಷಕರು ಬಹಳಷ್ಟು ಬಾರಿ ತಮ್ಮ ವಿದ್ಯಾರ್ಥಿಗಳ ಪರಿವೀಕ್ಷಣೆ ಮಾಡುತ್ತಿರುತ್ತಾರೆ. ಸಾಮಾನ್ಯವಾಗಿ ವಿದ್ಯಾರ್ಥಿಗಳು ತರಗತಿಯಲ್ಲಿ ಏನು ಮಾಡುತ್ತಾರೆಂದು ಗಮನಿಸುವ ಮೂಲಕ ಹಾಗು ಅವರು ಹೇಳುವುದನ್ನು ಆಲಿಸುವ ಮೂಲಕ ಪರಿವೀಕ್ಷಣೆ ನಡೆಯುತ್ತದೆ. ವಿದ್ಯಾರ್ಥಿಗಳ ಪ್ರಗತಿಯನ್ನು ಪರಿವೀಕ್ಷಣೆ ಮಾಡುವುದು ಬಹಳ ನಿರ್ಣಾಯಕ ಅಂಶವಾಗುತ್ತದೆ. ಇದರಿಂದ ವಿದ್ಯಾರ್ಥಿಗಳಿಗೆ ಅನೇಕ ರೀತಿಯಲ್ಲಿ ಲಾಭದಾಯಕವಾಗುತ್ತದೆ. ಅವುಗಳಲ್ಲಿ ಕೆಲವು

- ಉತ್ತಮ ಗ್ರೇಡ್ ಗಳನ್ನು ಗಳಿಸಲು
- ತಮ್ಮ ಕಾರ್ಯಕ್ಷಮತೆಯ ಬಗ್ಗೆ ಅರಿವು ಮೂಡಿಸಲು ಹಾಗು ತಮ್ಮ ಕಲಿಕೆಗೆ ತಾವೇ ಜವಾಬ್ದಾರರಾಗಲು
- ಕಲಿಕೆಯನ್ನು ಸುಧಾರಿಸಿಕೊಳ್ಳಲು
- ರಾಜ್ಯದ ಮತ್ತು ಸ್ಥಳೀಯ ಪರೀಕ್ಷೆಗಳಲ್ಲಿ ತಮ್ಮ ಸಾಧನೆ ಹೇಗಿರುತ್ತದೆ ಎಂದು ಮೊದಲೇ ತಿಳಿದುಕೊಳ್ಳಲು

ಇದಲ್ಲದೆ, ಒಬ್ಬ ಶಿಕ್ಷಕರಾಗಿ ಪರಿವೀಕ್ಷಣೆ ನಿಮಗೂ ಈ ಕೆಳಗಿನ ಅಂಶಗಳನ್ನು ನಿರ್ಧರಿಸಲು ನೆರವಾಗುತ್ತದೆ:

- ಪ್ರಶ್ನೆಯನ್ನು ಯಾವಾಗ ಕೇಳಬೇಕು ಅಥವಾ ಸುಳಿವು ಯಾವಾಗ ನೀಡಬೇಕು
- ಯಾವಾಗ ಪ್ರಶಂಸಿಸಬೇಕು
- ಸವಾಲನ್ನು ಎಸೆಯಬೇಕೆ ಬೇಡವೇ?
- ಒಂದು ಕೆಲಸದಲ್ಲಿ ವಿವಿಧ ಗುಂಪುಗಳ ವಿದ್ಯಾರ್ಥಿಗಳನ್ನು ಹೇಗೆ ತೊಡಗಿಸಿಕೊಳ್ಳುವುದು
- ತಪ್ಪುಗಳ ಬಗ್ಗೆ ಏನು ಮಾಡಬೇಕು

ತಮ್ಮ ಪ್ರಗತಿಯ ಬಗ್ಗೆ ಸಕಾಲದಲ್ಲಿ ಸ್ಪಷ್ಟವಾದ ಫೀಡ್ ಬ್ಯಾಕ್ ದೊರಕಿದಾಗ ವಿದ್ಯಾರ್ಥಿಗಳು ಬಹುಮಟ್ಟಿಗೆ ಸುಧಾರಿಸುತ್ತಾರೆ. ಪರಿವೀಕ್ಷಣೆ ಮಾಡುವುದರಿಂದ ನೀವು ನಿಯಮಿತವಾಗಿ ಫೀಡ್ ಬ್ಯಾಕ್ ನೀಡಬಹುದು. ಇದರಿಂದ ಅವರು ಹೇಗೆ ಮುನ್ನಡೆಯುತ್ತಿದ್ದಾರೆ ಹಾಗು ತಮ್ಮ ಕಲಿಕೆಯನ್ನು ಮುಂದೆ ತೆಗೆದುಕೊಂಡು ಹೋಗಲು ಇನ್ನೇನು ಮಾಡಬೇಕೆಂದು ವಿದ್ಯಾರ್ಥಿಗಳಿಗೆ ತಿಳಿಸಿದಂತಾಗುತ್ತದೆ.

ನೀವು ಎದುರಿಸಬಹುದಾದಂತಹ ಒಂದು ಸವಾಲೆಂದರೆ ವಿದ್ಯಾರ್ಥಿಗಳಿಗೆ ತಮ್ಮ ಸ್ವಂತ ಕಲಿಕೆಯ ಗುರಿಯನ್ನು ನಿಗದಿಪಡಿಸಿಕೊಳ್ಳಲು ನೆರವಾಗುವುದು. ಇದನ್ನು ಸೆಲ್ಫ್ ಮಾನಿಟರಿಂಗ್ ಅಥವಾ ಸ್ವಯಂ ಪರಿವೀಕ್ಷಣೆ ಎಂದೂ ಹೇಳಲಾಗುತ್ತದೆ. ಆದರೆ ನೀವು ಯಾವುದೇ ವಿದ್ಯಾರ್ಥಿಗೆ

ಒಂದು ಪ್ರಾಜೆಕ್ಟ್ ಗಾಗಿ ತಮ್ಮ ಸ್ವಂತ ಗುರಿಗಳನ್ನು ನಿಗದಿಪಡಿಸಿಕೊಳ್ಳಲು, ತಮ್ಮ ಕೆಲಸವನ್ನು ಯೋಜಿಸಲು ಹಾಗು ತಮ್ಮ ಪ್ರಗತಿಯನ್ನು ತಾವೇ ಪರಿವೀಕ್ಷಣೆ ಮಾಡಿಕೊಳ್ಳಲು, ಅವರಿಗೆ ನೆರವಾಗಬಹುದು.

## ವಿದ್ಯಾರ್ಥಿಗಳನ್ನು ಗಮನಿಸುವುದು ಮತ್ತು ಆಲಿಸುವುದು

ಬಹಳಷ್ಟು ಬಾರಿ ಶಿಕ್ಷಕರು ವಿದ್ಯಾರ್ಥಿಗಳನ್ನು ಗಮನಿಸುವುದು ಹಾಗು ಅವರು ಹೇಳುವುದನ್ನು ಆಲಿಸುವ ಕ್ರಿಯೆಯನ್ನು ಸಹಜವಾಗಿಯೇ ಮಾಡುತ್ತಾರೆ; ಇದು ಪರಿವೀಕ್ಷಣೆಯ ಒಂದು ಸರಳವಾದ ಸಾಧನ. ಉದಾಹರಣೆಗೆ ನೀವು ಈ ಕೆಳಗಿನವನ್ನು ಮಾಡುತ್ತಿರಬಹುದು:

- ನಿಮ್ಮ ವಿದ್ಯಾರ್ಥಿಗಳು ಜೋರಾಗಿ ಓದುವುದನ್ನು ಕೇಳಿಸಿಕೊಳ್ಳುವುದು
- ವಿದ್ಯಾರ್ಥಿಗಳು ಜೋಡಿಯಾಗಿ ಅಥವಾ ಗುಂಪಿನಲ್ಲಿ ಮಾಡುವ ಚರ್ಚೆಗಳನ್ನು ಕೇಳಿಸಿಕೊಳ್ಳುವುದು
- ತರಗತಿಯ ಹೊರಗೆ ಅಥವ ಒಳಗೆ, ಸಂಪನ್ಮೂಲಗಳನ್ನು ಬಳಸಿ ವಿದ್ಯಾರ್ಥಿಗಳನ್ನು ಗಮನಿಸುವುದು
- ಗುಂಪಿನಲ್ಲಿ ಕೆಲಸ ಮಾಡುವಾಗ ವಿದ್ಯಾರ್ಥಿಗಳ ಆಂಗಿಕ ಭಾಷೆಯನ್ನು ಗಮನಿಸುವುದು

ನೀವು ಗಮನಿಸುವ ಅಂಶಗಳು ವಿದ್ಯಾರ್ಥಿಯ ಕಲಿಕೆ ಅಥವಾ ಪ್ರಗತಿಯ ವಾಸ್ತವವಾದ ನೈಜ ಸಾಕ್ಷ್ಯಾಧಾರವೆಂಬುದನ್ನು ಖಚಿತ ಪಡಿಸಿಕೊಳ್ಳಿ. ನೀವು ನೋಡಬಹುದಾದ, ಕೇಳಿಸಿಕೊಳ್ಳಬಹುದಾದ, ಎಣಿಕೆ ಮಾಡಬಹುದಾದ ಮತ್ತು ಸಮರ್ಥಿಸಿಕೊಳ್ಳಬಹುದಾದ ಅಂಶಗಳನ್ನು ಮಾತ್ರ ದಾಖಲಿಸಿಕೊಳ್ಳಿ.

ವಿದ್ಯಾರ್ಥಿಗಳು ಕೆಲಸ ಮಾಡುತ್ತಿರುವಾಗ, ಸಂಕ್ಷಿಪ್ತವಾದ ಅವಲೋಕನಡಾ ಟಿಪ್ಪಣಿಗಳನ್ನು ಮಾಡಿಕೊಳ್ಳಲು ಸುಲಭವಾಗುವಂತೆ ತರಗತಿಯಲ್ಲಿ ಓಡಾಡಿ. ಯಾವ ವಿದ್ಯಾರ್ಥಿಗೆ ಹೆಚ್ಚಿನ ನೆರವು ಬೇಕಾಗುತ್ತದೆ ಎಂದು ದಾಖಲಿಸಲು ಹಾಗು ಹೊರಹೊಮ್ಮುತ್ತಿರುವ ಭಿನ್ನಾಭಿಪ್ರಾಯಗಳ ಬಗ್ಗೆ ಬರೆದುಕೊಳ್ಳಲು, ನೀವು ತರಗತಿಯಲ್ಲಿನ ವಿದ್ಯಾರ್ಥಿಗಳ ಪಟ್ಟಿಯನ್ನು ಬಳಸಬಹುದು. ಇಡೀ ತರಗತಿಗೆ ಫೀಡ್ ಬ್ಯಾಕ್ ನೀಡಲು, ಗುಂಪುಗಳಿಗೆ ಅಥವಾ ವೈಯಕ್ತಿಕವಾಗಿ ಸುಳಿವು ನೀಡಲು ನೀವು ಈ ಟಿಪ್ಪಣಿಗಳನ್ನು ಬಳಸಬಹುದು.

## ಫೀಡ್ ಬ್ಯಾಕ್ ನೀಡಿಕೆ

ಸ್ಪಷ್ಟ ಪಡಿಸಲಾದ ಒಂದು ಗುರಿ ಅಥವಾ ನಿರೀಕ್ಷಿತ ಫಲಿತಾಂಶಕ್ಕೆ ಸಂಬಂಧಿಸಿದಂತೆ ಅವರ ಕಾರ್ಯಕ್ಷಮತೆ ಹೇಗಿದೆ ಎಂದು ವಿದ್ಯಾರ್ಥಿಗಳಿಗೆ ನೀಡುವ ಮಾಹಿತಿಯೇ ಫೀಡ್ ಬ್ಯಾಕ್. ಸಮರ್ಪಕವಾದ ಫೀಡ್ ಬ್ಯಾಕ್ ವಿದ್ಯಾರ್ಥಿಗಳಿಗೆ ಒದಗಿಸುವ ಅಂಶಗಳೆಂದರೆ:

- ಏನು ನಡೆಯಿತು ಎಂಬುದರ ಬಗ್ಗೆ ಮಾಹಿತಿ
- ಯಾವುದೇ ಕೆಲಸ ಅಥವಾ ಕಾರ್ಯ ಎಷ್ಟು ಚೆನ್ನಾಗಿ ನಡೆಯಿತು ಎನ್ನುವುದರ ಬಗ್ಗೆ ಮೌಲ್ಯಮಾಪನ.
- ತಮ್ಮ ಕಾರ್ಯಕ್ಷಮತೆಯನ್ನು ಹೇಗೆ ಸುಧಾರಿಸಿಕೊಳ್ಳಬಹುದೆಂಬುದರ ಬಗ್ಗೆ ಮಾರ್ಗದರ್ಶನ

ನೀವು ಪ್ರತಿ ವಿದ್ಯಾರ್ಥಿಗೂ ಫೀಡ್ ಬ್ಯಾಕ್ ನೀಡಿದಾಗ, ಅದು ಅವರಿಗೆ ಈ ಅಂಶಗಳನ್ನು ತಿಳಿಯಲು ಸಹಾಯವಾಗಬೇಕು.

- ಅವರು ವಾಸ್ತವವಾಗಿ ಏನು ಮಾಡಬಲ್ಲರು
- ಅವರಿಗೆ ಸಧ್ಯದಲ್ಲಿ ಏನು ಮಾಡಲು ಸಾಧ್ಯವಿಲ್ಲ
- ಇತರರಿಗೆ ಹೋಲಿಸಿದರೆ ಅವರ ಕೆಲಸ ಹೇಗಿದೆ
- ಅವರು ಹೇಗೆ ಸುಧಾರಿಸಬಹುದು

ಪರಿಣಾಮಕಾರಿಯಾದ ಫೀಡ್ ಬ್ಯಾಕ್ ವಿದ್ಯಾರ್ಥಿಗಳಿಗೆ ಸಹಾಯ ಮಾಡುತ್ತದೆ ಎನ್ನುವುದನ್ನು ನೆನಪಿನಲ್ಲಿಟ್ಟುಕೊಳ್ಳುವುದು ಮುಖ್ಯ. ನಿಮ್ಮ ಅಸ್ಪಷ್ಟವಾದ ಅಥವಾ ಪಕ್ಷಪಾತವಾದ ಫೀಡ್ ಬ್ಯಾಕ್ ನಿಂದ ಕಲಿಕೆಗೆ ಧಕ್ಕೆ ಉಂಟಾಗ ಬಾರದು. ಪರಿಣಾಮಕಾರಿಯಾದ ಫೀಡ್ ಬ್ಯಾಕ್ ಎಂದರೆ:

- ಕೈಗೆತ್ತುಕೊಂಡ ಕೆಲಸದತ್ತ ಹಾಗು ವಿದ್ಯಾರ್ಥಿ ಮಾಡಬೇಕಾದ ಕಲಿಕೆಯತ್ತ ಗಮನ **ಕೇಂದ್ರೀಕೃತವಾಗಿರಬೇಕು**

- **ಸ್ಪಷ್ಟ, ಪ್ರಾಮಾಣಿಕ:** ವಿದ್ಯಾರ್ಥಿಗಳಿಗೆ ತಮ್ಮ ಕಲಿಕೆಯಲ್ಲಿ ಏನು ಉತ್ತಮವಾಗಿದೆ ಹಾಗು ಏನು ಸುಧಾರಿಸಬೇಕೆಂಬುದನ್ನು ಸ್ಪಷ್ಟವಾಗಿ ಪ್ರಾಮಾಣಿಕವಾಗಿ ಹೇಳಬೇಕು.
- **ಮಾಡುವಂತಹದು-** ವಿದ್ಯಾರ್ಥಿಗಳು ಮಾಡ ಬಹುದಾದಂತಹ ವಿಷಯಗಳನ್ನು ಮಾಡಲು ಹೇಳುವುದು
- ವಿದ್ಯಾರ್ಥಿ ಅರ್ಥಮಾಡಿಕೊಳ್ಳುವಂತಹ **ಸೂಕ್ತ ಭಾಷೆಯಲ್ಲಿ** ಫೀಡ್ ಬ್ಯಾಕ್ ನೀಡುವುದು
- **ಸಕಾಲದಲ್ಲಿ** ಸಮಯದಲ್ಲಿ ನೀಡುವುದು- ಬಹಳ ಬೇಗ ನೀಡಿದರೆ ವಿದ್ಯಾರ್ಥಿಯು ' ನಾನು ಅದನ್ನೇ ಮಾಡುತ್ತಿದೆ" ಎಂದು ಯೋಚಿಸುತ್ತಾನೆ. ಬಹಳ ತಡವಾಗಿ ನೀಡಿದರೆ ಅವರ ಗಮನ ಬೇರೆಲ್ಲಿಗೋ ಹರಡಿರುತ್ತದೆ ಹಾಗು ಮಾಡಲು ಹೇಳಿದ ವಿಷಯನ್ನು ಮತ್ತೆ ಹಿಂದಕ್ಕೆ ಹೋಗಿ ಮಾಡಲು ಅವರಿಗೆ ಇಷ್ಟವಿರುವುದಿಲ್ಲಾ.

ಫೀಡ್ ಬ್ಯಾಕ್ ಅನ್ನು ಮೌಕಿಕವಾಗಿ ನೀಡಿದರೂ ಅಥವಾ ವಿದ್ಯಾರ್ಥಿಗಳ ವರ್ಕ್ ಬುಕ್ ನಲ್ಲಿ ಬರೆದರೂ ಸರಿ, ಕೆಳಗೆ ನೀಡಿರುವ ಮಾರ್ಗಸೂಚಿಗಳನ್ನು ಅನುಸರಿಸಿದರೆ ಹೆಚ್ಚು ಪರಿಣಾಮಕಾರಿಯಾಗಿರುತ್ತದೆ.

## ಪ್ರಶಂಸೆ ಮತ್ತು ಸಕರಾತ್ಮಕವಾದ ಭಾಷೆಯನ್ನು ಬಳಸುವುದು

ತೆಗಳುವ ಅಥವಾ ತಿದ್ದುವ ಬದಲು ನಮ್ಮನ್ನು ಯಾರಾದರೂ ಹೊಗಳಿದರೆ ಅಥವಾ ಪೊತ್ಸಾಹಿಸಿದರೆ, ಹೆಚ್ಚು ಉತ್ತಮವೆನಿಸುತ್ತದೆ. ಇಡೀ ತರಗತಿಗೆ ಮತ್ತು ಎಲ್ಲಾ ವಯಸ್ಸಿನ ವ್ಯಕ್ತಿಗಳಿಗೆ ಸಕರಾತ್ಮಕ ಭಾಷೆ ಹಾಗು ಶಕ್ತಿ ತುಂಬುವ ಮಾತುಗಳು ಬಹಳ ಪ್ರೇರಕವಾಗಿರುತ್ತದೆ. ಪ್ರಶಂಸೆ, ಮಾಡಿದ ಕೆಲಸದ ಬಗ್ಗೆ ಗಮನ ಹರಿಸಬೇಕೇ ಹೊರತು, ವ್ಯಕ್ತಿಯ ಬಗ್ಗೆ ಅಲ್ಲಾ ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ಹಾಗಾಗದಿದ್ದರೆ, ವಿದ್ಯಾರ್ಥಿಯ ಪ್ರಗತಿಗೆ ಅದು ಪೂರಕವಾಗಿರುವುದಿಲ್ಲಾ. ' ಚೆನ್ನಾಗಿ ಮಾಡಿದ್ದೀಯ' ( ವೆಲ್ ಡನ್) ಎನ್ನುವುದು ಅನಿರ್ಧಿಷ್ಟವಾಗಿರುತ್ತದೆ. ಅದರ ಬದಲು ಕೆಳಗೆ ಸೂಚಿಸಿರುವಂತೆ ಹೇಳಬಹುದು:




ಸುಳಿವು ನೀಡುವುದರೊಂದಿಗೆ ತಿದ್ದುವುದು

ನೀವು ನಿಮ್ಮ ವಿದ್ಯಾರ್ಥಿಗಳೊಂದಿಗೆ ಆಡುವ ಮಾತುಕತೆ ಅವರ ಕಲಿಕೆಗೆ ನೆರವಾಗುತ್ತದೆ. ಅವರ ಉತ್ತರ ತಪ್ಪೆಂದು ಹೇಳಿ ಅಷ್ಟಕ್ಕೆ ಮಾತು ನಿಲ್ಲಿಸಿದಾಗ, ಅವರು ಯೋಚನೆ ಮುಂದುವರೆಸಲು ಹಾಗು ಪ್ರಯತ್ನಿಸಲು ಸಹಾಯ ಮಾಡುವ ಅವಕಾಶವನ್ನು ಕಳೆದುಕೊಳ್ಳುತ್ತೀರಿ. ನೀವು ವಿದ್ಯಾರ್ಥಿಗಳಿಗೆ ಒಂದು ಸುಳುವು ನೀಡಿದರೆ ಅಥವಾ ಇನ್ನೂ ಒಂದು ಪ್ರಶ್ನೆಯನ್ನು ಕೇಳಿದರೆ, ಅವರು ಆಳವಾಗಿ ಯೋಚಿಸಲು ಪ್ರೇರೇಪಿಸುತ್ತೀರಾ ಹಾಗು ತಮ್ಮ ಕಲಿಕೆಗೆ ತಾವೇ ಜವಾಬ್ದಾರರಾಗಲು ಹಾಗು ಉತ್ತರ ಹುಡಕಲು ಪ್ರೋತ್ಸಾಹಿಸಿದಂತಾಗುತ್ತದೆ. ಉದಾಹರಣೆಗೆ , ನೀವು ಕೆಳಗೆ ನೀಡಿರುವಂತಹ ಕೆಲವು ವಾಕ್ಯಗಳ ಮೂಲಕ ಇನ್ನೂ ಉತ್ತಮ ಉತ್ತರ ಕೊಡಲು ಅಥವಾ ಆ ಸಮಸ್ಯೆಗೆ ಬೇರೆ ಕೋನದಿಂದ ಯೋಚಿಸಲು ಪ್ರೋತ್ಸಾಹಿಸಿದಂತಾಗುತ್ತದೆ.

ಉತ್ತಮ
ಆರಂಭ…ಈಗ….ಬಗ್ಗೆ
ಇನ್ನು ಹೆಚ್ಚು ಆಲೋಚಿಸು

ಮತ್ತೊಮ್ಮೆ
ಯೋಚಿಸು

ಈ ಉತ್ತರ ಹೇಗೆ ಸಿಕ್ಕಿತ್ತೆಂದು
ವಿವರಿಸಿ

ಪರಸ್ಪರ ಸಹಾಯ ಮಾಡುವಂತೆ ಇತರ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಿಸುವುದು ಸೂಕ್ತವಾಗಬಹುದು. ಕೆಳಗೆ ನೀಡಿರುವ ಕೆಲವು ಹೇಳಿಕೆಗಳ ಮೂಲಕ ತರಗತಿಯಲ್ಲಿರುವ ಇತರರಿಗೆ ನಿಮ್ಮ ಪ್ರಶ್ನೆಗಳನ್ನು ಕೇಳಬಹುದು.

ಗುಂಪುಗಳು ಪರಸ್ಪರ
ಸಹಾಯ ಮಾಡುವುದನ್ನು
ನಾನು ನೋಡಬಯಸುತ್ತೇನೆ.

ಈ ಉತ್ತರಕ್ಕೆ ಇನ್ನೂ
ಹೆಚ್ಚಿನದನ್ನು
ಯಾರಾದರೂ
ಸೆರಿಸುತ್ತೀರಾ?

ಹಾಗಾದರೆ ನಮ್ಮಲ್ಲಿ ಎರಡು
ಅಂಶಗಳಿವೆ. ನಾವು ಇನ್ನೇನು
ಅಂಶಗಳನ್ನು ಗಮನಿಸಬಹುದು.

ಸ್ಪೆಲ್ಲಿಂಗ್ ಅಥವಾ ಗಣಿತದ ಅಭ್ಯಾಸಕ್ಕೆ ಸಂಬಂಧಿಸಿದಂತೆ ' ಹೌದು' ಇಲ್ಲಾ' ಎಂದು ವಿದ್ಯಾರ್ಥಿಗಳನ್ನು ತಿದ್ದವುದು ಸೂಕ್ತವಾಗಬಹುದು. ಇಲ್ಲೂ ಸಹ ತಮ್ಮ ಉತ್ತರದಲ್ಲಿ ಹೊರಹೊಮ್ಮುತ್ತಿರುವ ಒಂದು ಸ್ವರೂಪವನ್ನುಗಮನಿಸಲು, ಇಂತಹುದೇ ಉತ್ತರಗಳಿಗೆ ಸಂಬಂಧ ಕಲ್ಪಿಸಲು ಅಥವಾ ಒಂದು ಉತ್ತರ ಏಕೆ ಸರಿ ಎಮ್ದು ಚರ್ಚೆ ಪ್ರಾರಂಭಿಸಲು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಬಹುದು.

ಸ್ವಯಂ ತಿದ್ದುಕೊಳ್ಳುವಿಕೆ ಹಾಗು ಅವರ ಸಮವಯಸ್ಕರಿಂದ ತಿದ್ದುವಿಕೆ ಪರಿಣಾಮಕಾರಿಯಾಗಿರುತ್ತದೆ. ತಮ್ಮ ಕೆಲಸಗಳನ್ನು ಇನ್ನೊಬ್ಬ ವಿದ್ಯಾರ್ಥಿಯೊಡನೆ ಜೋಡಿಯಾಗಿ ಮಾಡುತ್ತಿ ರುವಾಗ, ಅವರ ಕೆಲಸವನ್ನು ಮತ್ತು ತಮ್ಮ ಸಹ ವಿದ್ಯಾರ್ಥಿಯ ಕೆಲಸವನ್ನು ಪರೀಕ್ಷಿಸಲು ನೀವು ಪ್ರೋತ್ಸಾಹಿಸಬಹುದು. ಮಾಹಿತಿ ಗೊಂದಲಮಯವಾಗದಂತೆ, ಒಂದು ಬಾರಿಗೆ ಒಂದು ಅಂಶವನ್ನು ತಿದ್ದುವುದು ಲೇಸು.

## ಸಂಪನ್ಮೂಲ ೨: ಪಾಠಗಳನ್ನು ಯೋಜಿಸುವುದು

ಪಾಠಗಳನ್ನು ಯೋಜಿಸುವುದು ಮತ್ತು ಸಿದ್ಧತೆ ಮಾಡಿಕೊಳ್ಳುವುದು ಏಕೆ ಮುಖ್ಯವಾಗುತ್ತದೆ

ಪಾಠಗಳು ಉತ್ತಮವಾಗಿರಲು ಪಾಠಗಳನ್ನು ಯೋಜಿಸಬೇಕಾಗುತ್ತದೆ. ಹೀಗೆ ಯೋಜಿಸಿದಾಗ, ನಿಮ್ಮ ಪಾಠಗಳು ಸ್ಪಷ್ಟವಾಗಿರುತ್ತವೆ ಹಾಗು ಅದಕ್ಕೆ ತೆಗೆದುಕೊಳ್ಳುವ ಸಮಯವೂ ಸೂಕ್ತವಾಗಿರುತ್ತದೆ. ಅಂದರೆ ನೀವು ಪಾಠ ಮಾಡುವಾಗ ವಿದ್ಯಾರ್ಥಿಗಳು ಸಕ್ರಿಯವಾಗಿ ಆಸಕ್ತರಾಗಿರುತ್ತಾರೆ. ಪರಿಣಾಮಕಾರಿಯಾದ ಪ್ಲಾನಿಂಗ್, ಶಿಕ್ಷಕರು ಪಾಠ ಮಾಡುತ್ತಿರುವಾಗ ತಮ್ಮ ವಿದ್ಯಾರ್ಥಿಗಳ ಕಲಿಕೆಯ ಬಗ್ಗೆ ಏನು ಕಂಡು ಕೊಳ್ಳುತ್ತಾರೋ ಅದಕ್ಕೆ ಅನುಗುಣವಾಗಿ ಪ್ರತಿಕ್ರಿಯಿಸಲು ಆಂತರಿಕ ನಮ್ಯತೆಯನ್ನು ಸಹ ಒಳಗೊಂಡಿರುತ್ತದೆ. ವಿದ್ಯಾರ್ಥಿಗಳನ್ನು ಮತ್ತು ಅವರ ಪೂರ್ವ ಕಲಿಕೆಯನ್ನು ಅರಿತಿರುವುದು , ಪಠ್ಯಕ್ರಮದ ಜೊತೆ ಮುನ್ನಡೆಯುವುದೆಂದರೇನು ತಿಳಿದಿರುವುದು ಹಾಗು ವಿದ್ಯಾರ್ಥಿಗಳ ಕಲಿಕೆಗೆ ಸಹಾಯ ಮಾಡಲು ಅತ್ಯುತ್ತಮ ಚಟುವಟಿಕೆಗಳು ಮತ್ತು ಸಂಪನ್ಮೂಲಗಳನ್ನು ಹುಡುಕುವುದು- ಈ ಎಲ್ಲಾ ಅಂಶಗಳು ಸರಣಿ ಪಾಠಗಳ ಪ್ಲಾನ್ನಲ್ಲಿ ಒಳಗೊಂಡಿರುತ್ತದೆ.

ವೈಯಕ್ತಿಕ ಪಾಠಗಳು ಮತ್ತು ಸರಳಿ ಪಾಠಗಳಿಗೆ ಸಿದ್ಧ ಮಾಡಿಕೊಳ್ಳಲು ಪ್ಲಾನಿಂಗ್ ಒಂದು ಮುಂದುವರೆದುಕೊಂಡು ಹೋಗುವ ಪ್ರಕ್ರಿಯೆ. ಪ್ರತಿ ಪ್ಲಾನ್ ಅದರ ಹಿಂದಿನ ಪ್ಲಾನ್ ನಿಂದ ಮುಂದುವರೆಯುತ್ತದೆ. ಲೆಸನ್ ಪ್ಲಾನಿಂಗಿನ ಹಂತಗಳು:

- ಪ್ರಗತಿ ಸಾಧಿಸಲು ನಿಮ್ಮ ವಿದ್ಯಾರ್ಥಿಗಳ ಅಗತ್ಯದ ಬಗ್ಗೆ ಸ್ಪಷ್ಟವಾಗಿರುವುದು
- ವಿದ್ಯಾರ್ಥಿಗಳಿಗೆ ಅರ್ಥವಾಗುವಂತೆ ಹೇಗೆ ಬೋಧಿಸಬೇಕೆಂದು ಹಾಗು ನೀವು ಕಂಡು ಕೊಳ್ಳುವ ಅಂಶಗಳಿಗೆ ಅನುಸಾರವಾಗಿ ನಮ್ಯತೆಯನ್ನು ರೂಡಿಸಿಕೊಂಡು ಹೇಗೆ ಪ್ರತಿಕ್ರಿಯಿಸ ಬೇಕೆಂದು ನಿರ್ಧರಿಸುವುದು.
- ಮುಂದಿನ ಪಾಠಗಳಿಗೆ ಯೋಜಿಸಲು, ಹಿಂದಿನ ಪಾಠ ಎಷ್ಟು ಚೆನ್ನಾಗಿ ಆಯಿತು ಹಾಗು ವಿದ್ಯಾರ್ಥಿಗಳು ಏನು ಕಲಿತ್ತಿದ್ದಾರೆ ಎಂದು ಅವಲೋಕಿಸುವುದು.

## ಸರಣಿ ಪಾಠವನ್ನು ಯೋಜಿಸುವುದು

ನೀವು ಒಂದು ಪಠ್ಯಕ್ರಮವನ್ನು ಅನುಸರಿಸುವಾಗ, ಅದರಲ್ಲಿನ ವಸ್ತುವಿಷಯಗಳು ಮತ್ತು ಪ್ರಸಕ್ತ ವಿಷಯಗಳನ್ನು ವಿಭಾಗಗಳನ್ನಾಗಿ ವಿಂಗಡಿಸುವುದು ಯೋಜನೆಯ ಮೊದಲ ಹಂತ. ಲಭ್ಯವಿರುವ ಸಮಯ, ವಿದ್ಯಾರ್ಥಿಗಳು ತಮ್ಮ ಜ್ಞಾನ ಹಾಗು ಕೌಶಲಗಳನ್ನು ಬೆಳೆಸಿಕೊಳ್ಳಲು, ಪ್ರಗತಿ ಹೊಂದಲು ವಿವಿಧ ಮಾರ್ಗಗಳನ್ನು ನೀವು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಒಂದು ವಿಷಯ ನಾಲ್ಕು ಪಾಠಗಳನ್ನು ತೆಗೆದುಕೊಂಡರೆ, ಮತ್ತೊಂದು ವಿಷಯ ಕೇವಲ ಎರಡು ಪಾಠಗಳನ್ನು ತೆಗೆದುಕೊಳ್ಳಬಹುದೆಂದು ನಿಮ್ಮ ಅನುಭವ ಅಥವಾ ಸಹದ್ಯೋಗಿಗಳೊಡನೆ ಚರ್ಚೆಯಿಂದ ತಿಳಿದಿರಬಹುದು.

ಎಲ್ಲಾ ಲೆಸನ್ ಪ್ಲಾನ್ ಗಳಲ್ಲೂ ನೀವು ಕೆಳಗಿನ ಅಂಶಗಳ ಬಗ್ಗೆ ಸ್ಪಷ್ಟತೆ ಹೊಂದಿರಬೇಕು:

- ನಿಮ್ಮ ವಿದ್ಯಾರ್ಥಿಗಳು ಏನು ಕಲಿಯಬೇಕೆಂದು ಬಯಸುತ್ತೀರಿ
- ಆ ಕಲಿಕೆಯನ್ನು ನೀವು ಹೇಗೆ ಪರಿಚಯಿಸುತ್ತೀರಾ?
- ವಿದ್ಯಾರ್ಥಿಗಳು ಏನು ಮಾಡಬೇಕು ಮತ್ತು ಏಕೆ ಮಾಡಬೇಕು.

ವಿದ್ಯಾರ್ಥಿಗಳಲ್ಲಿ ಉತ್ಸಾಹ ಮತ್ತು ಆಸಕ್ತಿ ಹುಟ್ಟುವಂತೆ ಕಲಿಕೆಯನ್ನು ಸಕ್ರಿಯವಾಗಿಯೂ ಸ್ವಾರಸ್ಯಕರವಾಗಿ ಮಾಡಲು ಬಯಸುತ್ತೀರಿ. ಪಾಠಗಳ ಸರಣಿಯಲ್ಲಿ ವಿದ್ಯಾರ್ಥಿಗಳಿಗೆ ಏನು ಮಾಡಲು ಹೇಳಲಾಗುತ್ತದೆ ಎಂಬುದನ್ನು, ಗಣನೆಗೆ ತೆಗೆದುಕೊಂಡರೆ, ಬೋಧನೆಯಲ್ಲಿ ವೈವಿಧ್ಯತೆ ಮತ್ತು ಆಸಕ್ತಿಯಲ್ಲದೆ, ನಮ್ಯತೆಯನ್ನೂ ತರಲು ಸಾಧ್ಯವಾಗುತ್ತದೆ. ಸರಣಿ ಪಾಠಗಳನ್ನು ವಿದ್ಯಾರ್ಥಿಗಳು ಕಲಿಯುತ್ತಾ ಮುಂದೆ ಸಾಗಿದಂತೆ , ಅವರು ಎಷ್ಟು ಅರ್ಥಮಾಡಿಕೊಂಡಿದ್ದಾರೆ ಎಂದು ಹೇಗೆ ಪರೀಕ್ಷಿಸುವುದೆಂಬುದನ್ನು ಯೋಜಿಸಿ. ಕೆಲವು ಅಂಶಗಳು ಹೆಚ್ಚು ಸಮಯ ತೆಗೆದುಕೊಳ್ಳಬಹುದು ಅಥವಾ ಕೆಲವು ಬೇಗೆ ಅರ್ಥವಾಗಬಹುದು- ಇದಕ್ಕಾಗಿ ಸಿದ್ಧರಾಗಿರಿ.

## ವೈಯಕ್ತಿಕ ಪಾಠಗಳನ್ನು ಸಿದ್ಧಪಡಿಸುವುದು

ನೀವು ಸರಣಿ ಪಾಠಗಳನ್ನು ಯೋಜಿಸಿದ ಮೇಲೆ, **ಆ ಹಂತದವರೆಗೂ ವಿದ್ಯಾರ್ಥಿಗಳು ಮಾಡಿರುವ ಪ್ರಗತಿಯ ಆಧಾರದ** ಮೇಲೆ ಪ್ರತಿ ಪಾಠವನ್ನು ಯೋಜಿಸಬೇಕು. ಸರಣಿ ಪಾಠಗಳ ಅಂತ್ಯಕ್ಕೆ ವಿದ್ಯಾರ್ಥಿಗಳು ಏನು ಕಲಿತಿರಬೇಕು ಅಥವಾ ಏನು ಮಾಡಬಲ್ಲರು ಎಂದು ನಿಮಗೆ ತಿಳಿದುರತ್ತದೆ, ಆದರೆ ಅನಿರೀಕ್ಷಿತವಾಗಿ ನೀವು ಏನನ್ನೋ ಪುನರಾವಲೋಕನ ಮಾಡುವ ಅಗತ್ಯ ಬರಬಹುದು ಅಥವಾ ಇನ್ನೂ ವೇಗವಾಗಿ ಮುಂದೆ ಹೋಗಬೇಕಾಗಬಹುದು. ಆದ್ದರಿಂದ ನಿಮ್ಮ ಎಲ್ಲಾ ವಿದ್ಯಾರ್ಥಿಗಳು ಪ್ರಗತಿ ಹೊಂದುವಂತೆ ಹಾಗು ಅವರಲ್ಲಿ ಯಶಸ್ಸಿನ ಭಾವನೆ ಬರಲು ಅನುವಾಗುವಂತೆ ನಿಮ್ಮ ಪಾಠವನ್ನು ಪ್ಲಾನ್ ಮಾಡಬೇಕು.

ನೀವು ಲೆಸನ್ ಪ್ಲಾನ್ ಮಾಡುವಾಗ ಪ್ರತಿ ಚಟುವಟಿಕೆಗು ಸಮಯವಿರುವಂತೆ ಮತ್ತು ಪ್ರಾಯೋಗಿಕ ಚಟುವಟಿಕ್ಕೆ ಅಥವಾ ಗುಂಪು ಚಟುವಟಿಕೆಗಳಿಗೆ ಸಂಪನ್ಮೂಲಗಳು ಸಿದ್ಧರಾಗಿರುವಂತೆ ಖಚಿತಗೊಳಿಸಿಕೊಳ್ಳ ಬೇಕು. ದೊಡ್ಡ ತರಗತಿಗಳಿಗೆ ಸಾಧನಗಳನ್ನು ಯೋಜಿಸುವಾಗ, ವಿವಿಧ ಗುಂಪುಗಳಿಗೆ ವಿವಿಧ ಪ್ರಶ್ನೆಗಳನ್ನು ಯೋಜಿಸಬೇಕಾಗುತ್ತದೆ.

ಹೊಸ ವಿಷಯಗಳ ಬಗ್ಗೆ ಬೋಧಿಸುವಾಗ, ಆತ್ಮ ವಿಶ್ವಾಸ ಹೆಚ್ಚಿಸಿಕೊಳ್ಳಲು ನೀವು ಬೋಧನೆಯನ್ನು ಅಭ್ಯಾಸಿಸಲು ಸಮಯ ಮಾಡಿಕೊಳ್ಳಬೇಕು ಅಥವಾ ಇತರ ಶಿಕ್ಷಕರೊಂದ್ಗೆ ನಿಮ್ಮ ಆಲೋಚನೆಗಳನ್ನ್ ಚರ್ಚಿಸಿ.

ನಿಮ್ಮ ಪಾಠಗಳನ್ನು ಮೂರು ಭಾಗಗಳಾಗಿ ಸಿದ್ಧಪಡಿಸುವ ಬಗ್ಗೆ ಯೋಚಿಸಿ. ಈ ಮೂರು ಭಾಗಗಳನ್ನು ಇಲ್ಲಿ ಕೆಳಗೆ ನೀಡಲಾಗಿದೆ

## ೧. ಪರಿಚಯ

ನೀವು ಪಾಠ ಪ್ರಾರಂಭಿಸುವಾಗ, ವಿದ್ಯಾರ್ಥಿಗಳಿಗೆ ಅವರು ಏನು ಕಲಿಯುತ್ತಾರೆ ಮತ್ತು ಮಾಡುತ್ತಾರೆ ಎಂಬುದನ್ನು ವಿವರಿಸಿ. ಆಗ ಎಲ್ಲರಿಗೂ ತಮ್ಮಿಂದ ಏನನ್ನು ನಿರೀಕ್ಷಿಸಲಾಗುತ್ತಿದೆ ಎಂಬುದು ತಿಳಿಯುತ್ತದೆ. ವಿದ್ಯಾರ್ಥಿಗಳಿಗೆ ಆ ವಿಷಯದ ಬಗ್ಗೆ ಈಗಾಗಲೇ ತಿಳಿದಿರುವ ಅಂಶಗಳನ್ನು ಹಂಚಿಕೊಳ್ಳಲು ಅವಕಾಶ ನೀಡುವ ಮೂಲಕ ತಾವು ಕಲಿಯುವ ವಿಷಯಗಳ ಬಗ್ಗೆ ಆಸಕ್ತಿ ಮೂಡಿಸಬೇಕು.

## ೨. ಪಾಠದ ಮುಖ್ಯ ಭಾಗ

ವಿದ್ಯಾರ್ಥಿಗಳಿಗೆ ಈಗಾಗಲೇ ಗೊತ್ತಿರುವ ಅಂಶಗಳನ್ನು ಆದರಿಸಿ ವಸ್ತು ವಿಷಯದ ಸ್ಥೂಲಚಿತ್ರಣವನ್ನು ನೀಡಿ. ಸ್ಥಳೀಯ ಸಂಪನ್ಮೂಲಗಳು, ಹೊಸ ಮಾಹಿತಿ ಅಥವಾ ಗುಂಪುಕಾರ್ಯ ಅಥವ ಸಮಸ್ಯೆ ಪರಿಹರಿಸುವಂತಹ ಸಕ್ರಿಯವಾದ ಕ್ರಮಗಳನ್ನು ಬಳಸಬಹುದು. ನಿಮ್ಮ ತರಗತಿಯ ಕೊಠಡಿಯಲ್ಲಿನ ಸ್ಥಳವನ್ನು ಹೇಗೆ ಬಳಸಿಕೊಳ್ಳುತ್ತೀರಿ ಎಂಬುದನ್ನು ಯೋಚಿಸಿ ಹಾಗು ನೀವು ಬಳಸುವ ಸಂಪನ್ಮೂಲಗಳನ್ನು ಗುರುತಿಸಿ. ಪಾಠ ಯೋಜಿಸುವಾಗ, ವಿವಿಧ ಸಂಪನ್ಮೂಲಗಳು, ಚಟುವಟಿಕೆಗಳ ಬಳಕೆ ಹಾಗು ಸಮಯವನ್ನು ನಿಗದಿ ಪಡಿಸುವುದು ಬಹಳ ಮುಖ್ಯ. ನೀವು ಹೆಚ್ಚು ಚಟುವಟಿಕೆಗಳು ಮತ್ತು ಕ್ರಮಗಳನ್ನು ಬಳಸಿದರೆ, ವಿದ್ಯಾರ್ಥಿಗಳು ವಿವಿಧ ರೀತಿಗಳಲ್ಲಿ ಕಲಿಯುವದರಿಂದ ನೀವು ಹೆಚ್ಚು ವಿದ್ಯಾರ್ಥಿಗಳನ್ನು ಮುಟ್ಟಲು ಸಾಧ್ಯವಾಗುತ್ತದೆ.

## ೩. ಕಲಿಕೆ ಎಷ್ಟು ಮಟ್ಟಕ್ಕೆ ಆಗಿದೆ ಎಂದು ತಿಳಿಯಲು ಪಾಠದ ಅಂತ್ಯ

ಎಷ್ಟು ಪ್ರಗತಿಯಾಗಿದೆ ಅಂದು ತಿಳಿಯಲು ಸಮಯವನ್ನು ನೀಡಿ( ಪಾಠ ಮಾಡುವಾಗ ಅಥವಾ ಕೊನೆಯಲ್ಲಿ). ಇದನ್ನು ಪರೀಕ್ಷಿಸಲು ಯಾವಾಗಲೂ ಟೆಸ್ಟ್ ನೀಡಬೇಕೆಂಬ ಅರ್ಥವಲ್ಲ. ಸಾಧಾರಣವಾಗಿ ಮೊದಲೇ ಸಿದ್ಧಪಡಿಸಿಕೊಂಡಿರುವ ಪ್ರಶ್ನೆ ಕೇಳುವುದು ಅಥವಾ ತಾವು ಕಲಿತಿರುವುದನ್ನು ವಿದ್ಯಾರ್ಥಿಗಳು ಹೇಗೆ ಹೇಳುತ್ತಾರೆ ಎಂಬುದನ್ನು ಗಮನಿಸುವುದರ ಮೂಲಕ ಪ್ರಗತಿಯನ್ನು ಅಳೆಯಬಹುದು. ಆದರೆ ವಿದ್ಯಾರ್ಥಿಗಳ ಪ್ರತಿಕ್ರಿಯೆಗಳಿಂದ ಕಂಡು ಬರುವ ವಿಷಯವನ್ನು ಆಧರಿಸಿ ಸೂಕ್ತ ಬದಲಾವಣೆಗಳನ್ನು ಮಾಡಿಕೊಳ್ಳಲು ನೀವು ಸಿದ್ಧರಿರಬೇಕು.

ಪಾಠದ ಪ್ರಾರಂಭದಲ್ಲಿ ಇದ್ದ ಗುರಿಗಳತ್ತ ಮತ್ತೊಮ್ಮೆ ತೆರಳಿ , ಆ ಕಲಿಕೆಯ ಬಗ್ಗೆ ತಮ್ಮ ಪ್ರಗತಿಯ ಬಗ್ಗೆ ಪರಸ್ಪರರೊಡನೆ ಹಾಗು ನಿಮಗೂ ಹೇಳಲು ವಿದ್ಯಾರ್ಥಿಗಳಿಗೆ ಅನುವು ಮಾಡಿಕೊಡುವುದು ಪಾಠವನ್ನು ಅಂತ್ಯಗೊಳಿಸುವ ಉತ್ತಮ ರೀತಿ. ನೀವು ವಿದ್ಯಾರ್ಥಿಗಳು ಹೇಳಿದನ್ನು ಕೇಳಿಸಿಕೊಂಡರೆ , ಮುಂದಿನ ಪಾಠಕ್ಕೆ ಹೇಗೆ ಯೋಜಿಸಬೇಕೆಂದು ನಿಮಗೆ ಖಾತ್ರಿಯಾಗುತ್ತದೆ.

## ಪಾಠಗಳ ಪರಿಶೀಲನೆ

ಪ್ರತಿ ಪಾಠವನ್ನು ಮತ್ತೊಮ್ಮೆ ನೋಡಿ, ನೀವು ಏನು ಮಾಡಿದಿರಿ, ವಿದ್ಯಾರ್ಥಿಗಳು ಏನು ಕಲಿತರು, ಯಾವ ಸಂಪನ್ಮೂಲಗಳನ್ನು ಬಳಸಲಾಯಿತು ಹಾಗು ಪಾಠ ಬೋದಧೆ ಎಷ್ಟು ಚೆನ್ನಾಗಿ ನಡೆಯಿತು ಎಂಬುದರ ಬಗ್ಗೆ ಬರೆದಿಟ್ಟುಕೊಳ್ಳಿ. ಇದರಿಂದ ನಿಮ್ಮ ಮುಂದಿನ ಪಾಠಗಳಲ್ಲಿ ಸುಧಾರಣೆಗಳನ್ನು

ಅಥವಾ ಸ್ವಲ್ಪ ಬದಲಾಯಿಸಿಕೊಳ್ಳಲು ನಿಮಗೆ ಸುಲಭವಾಗುತ್ತದೆ. ಉದಾಹರಣೆಗೆ ನೀವು ಈ ಕೆಳಗಿನ ವಿಷಯಗಳನ್ನು ಮಾಡಲು ನಿರ್ಧರಿಸಬಹುದು:

- ಚಟುವಟಿಕೆಗಳನ್ನು ಬದಲಾಯಿಸುವುದು ಅಥವಾ ಮಾರ್ಪಾಡು ಮಾಡುವುದು
- ಒಂದಕ್ಕಿಂತ ಹೆಚ್ಚು ಉತ್ತರ ಬರುವಂತಹ ಮುಕ್ತ ಪ್ರಶ್ನೆಗಳು ಮತ್ತು ಕೇವಲ ಒಂದು ಪದದ ಉತ್ತರ ಬರುವಂತಹ ಮುಚ್ಚಿದ ಪ್ರಶ್ನೆಗಳ ಒಂದು ಪಟ್ಟಿಯನ್ನು ಸಿದ್ಧಪಡಿಸಿಕೊಳ್ಳುವುದು
- ಇನ್ನೂ ಹೆಚ್ಚಿನ ನೆರವು ಅಗತ್ಯವಿರುವ ವಿದ್ಯಾರ್ಥಿಗಳಿಗಾಗಿ ಫಾಲೋ ಅಪ್ ( ಮುಂದುವರೆದ) ಸೆಷನ್ ಗಳನ್ನು ವ್ಯವಸ್ಥೆಗೊಳಿಸುವುದು.

ವಿದ್ಯಾರ್ಥಿಗಳು ಇನ್ನೂ ಹೆಚ್ಚು ಉತ್ತಮವಾಗಿ ಕಲಿಯಲು ನೀವು ಏನು ಮಾಡಬಹುದಾಗಿತ್ತು ಅಥವಾ ಯೋಜಿಸಬಹುದಾಗಿತ್ತು ಎಂಬುದರ ಬಗ್ಗೆ ಆಲೋಚಿಸಿ.

ಮುಂದೇನಾಗುತ್ತದೆ ಎಂದು ಎಲ್ಲವನ್ನೂ ನಾವು ನಿರೀಕ್ಷಿಸಲು ಸಾಧ್ಯವಿಲ್ಲವಾದುದರಿಂದ, ನೀವು ಪ್ರತಿ ಪಾಠವನ್ನು ಅಧ್ಯಯನ ಮಾಡುವಾಗ, ನಿಮ್ಮ ಲೆಸನ್ ಪ್ಲಾನ್ ಅನಿವಾರ್ಯವಾಗಿ ಬದಲಾಗುತ್ತದೆ. ಉತ್ತಮ ಯೋಜನೆ ಇದ್ದರೆ, ಆಗ ನಿಮ್ಮವಿದ್ಯಾರ್ಥಿಗಳ ವಾಸ್ತವವಾದ ಕಲಿಕೆ ಏನೆಂದು ತಿಳಿದು ಅದಕ್ಕೆ ಅನುಗುಣವಾಗಿ ಪ್ರತಿಕ್ರಿಯಿಸಲು ನೀವು ಸಿದ್ಧವಾಗಿರುತ್ತೀರಿ ಮತ್ತು ಯಾವ ರೀತಿಯ ಕಲಿಕೆಯಾಗ ಬೇಕೆಂದು ಸಹ ನಿಮಗೆ ತಿಳಿದಿರುತ್ತದೆ.

# ಹೆಚ್ಚುವರಿ ಸಂಪನ್ಮೂಲಗಳು

- Teaching poetry at GCSE: http://www.youtube.com/watch?v=vZgvHmviq-U
- Primary talk and success criteria: http://www.youtube.com/watch?v=1v2QbW3_Ai4
- *Learning to teach* (OpenLearnunit): http://www.open.edu/openlearn/learning-teach/content-section-0

# ಪರಮಾರ್ಶಕ ಗ್ರಂಥಗಳು/ ಗ್ರಂಥಸೂಚಿ


Muralidharan, K. and Sundararaman, V. (2010) 'The impact of diagnostic feedback to teachers on student learning: experimental evidence from India', *Economic Journal*, vol. 120, no. 546, pp. 187–203.

Jones, J., Jenkin, M. and Lord S. (2006) *Developing Effective Teacher Performance*. London: Sage Publications.

Wragg, E.C. (2012) *An Introduction to Classroom Observation*, 3rd edn. London: Routledge.

Lofthouse, R., Leat, D., Towler, C., Hall, E. and Cummings, C. (2010) *Improving Coaching: Evolution not Revolution.* Reading: CfBT Education Trust.

Lofthouse, R., Leat, D. and Towler, C. (2010) *Coaching for Teaching and Learning: A Practical Guide for Schools.* Reading: CfBT Education Trust. Available from: www.ncl.ac.uk/cflat/news/documents/5414_CfT_FinalWeb.pdf (accessed 19 July 2014).


# ನೆನೆಕೆಗಳು

This content is made available under a Creative Commons Attribution-ShareAlike licence (http://creativecommons.org/licenses/by-sa/3.0/), unless identified otherwise. The licence excludes the use of the TESS-India, OU and UKAID logos, which may only be used unadapted within the TESS-India project.

Every effort has been made to contact copyright owners. If any have been inadvertently overlooked the publishers will be pleased to make the necessary arrangements at the first opportunity.

Video (including video stills): thanks are extended to the teacher educators, headteachers, teachers and students across India who worked with The Open University in the productions.